# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಫೆಬ್ರವರಿ 17, 2023

ಸಂಪುಟ : 49 ಸಂಚಿಕೆ : 276 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ಕೊಟ್ಟೂರು, ಫೆ. 16- ವಿಜಯ ನಗರ ಜಿಲ್ಲೆ ಕೊಟ್ಟೂರು ಪಟ್ಟಣದಲ್ಲಿ ಶ್ರೀ ಗುರು ಕೊಟ್ಟೂರೇಶ್ವರರ ರಥೋತ್ಸವವು ಗುರುವಾರ ಸಂಜೆ ಅಪಾರ ಜನಸ್ತೋಮದ ನಡುವೆ ಸಂಭ್ರಮದಿಂದ ಜರುಗಿತು. ಮಾಘ ಬಹುಳ ದಶಮಿಯ ಮೂಲಾ ನಕ್ಷತ್ರ ಕೂಡಿದಾಗ ಕೊಟ್ಟೂರೇಶ್ವರರು ಜೀವಂತ ಸಮಾಧಿಯಾಗಿದ್ದರು. ಅದೇ ಸಮಯದಲ್ಲಿ ರಥೋತ್ಸವ ನಡೆಯುತ್ತದೆ. 'ಕೊಟ್ಟೂರು ದೊರೆಯೇ ನಿನಗಾರು ಸರಿಯೇ, ಸರಿ ಸರಿ ಅಂದವರ ಹಲ್ಲುಮುರಿವೆ ಬಹುಪರಾಕ್' ಎಂದು ಭಕ್ತರ ಘೋಷಣೆ ಮುಗಿಲು ಮುಟ್ಟಿತ್ತು. ಎಲ್ಲೆಡೆ ಭಕ್ತಿ, ಸಂಭ್ರಮದ ವಾತಾವರಣ ಸೃಷ್ಟಿಯಾಗಿತ್ತು. ರಥ ಬೀದಿಯಲ್ಲಿ ತೇರು ಚಲಿಸುತ್ತಿದ್ದಂತೆ ರಸ್ತೆ ಬದಿ, ಕಟ್ಟಡಗಳ ಮೇಲೆ ಕುಳಿತಿದ್ದವರೆಲ್ಲರೂ ಅಲ್ಲಿಂದಲೇ ಎರಡೂ ಕೈಮುಗಿದು ನಮಸ್ಕರಿಸಿದರು.

## ಎಫ್.ಎಂ. ರೇಡಿಯೋಗಳ ಹರಾಜಿಗೆ ಕೇಂದ್ರದ ನಿರ್ಧಾರ

ನವದೆಹಲಿ, ಫೆ. 16 – ಪ್ರಸಾರ ಭಾರತಿಯ ವ್ಯಾಪ್ತಿ ಹೆಚ್ಚಿಸುವ ಸಲುವಾಗಿ ಈ ವರ್ಷ ಎಫ್.ಎಂ. ರೇಡಿಯೋಗಳ ಹೊಸ ಹರಾಜು, ಒ.ಟಿ.ಟಿ. ವೇದಿಕೆಗಳ ಆರಂಭ ಹಾಗೂ ಪ್ರಾಯೋಗಿಕವಾಗಿ ಮೊಬೈಲ್‌ಗೆ ನೇರವಾಗಿ ಟಿ.ವಿ.ಗಳ ಪ್ರಸಾರ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ವಿಷಯ ತಿಳಿಸಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಕಾರ್ಯದರ್ಶಿ ಅಪೂರ್ವ ಚಂದ್ರ, ಈ ವರ್ಷ ಎರಡು ಹಾಗೂ ಮೂರನೇ ಹಂತದ ನಗರಗಳಿಗೆ ಎಫ್. ಎಂ. ರೇಡಿಯೋ ಕೇಂದ್ರಗಳ ಮರು ಹರಾಜು ಮಾಡಲಾಗುವುದು ಎಂದು ಹೇಳಿದರು. ದೇಶದಲ್ಲಿ ದೊಡ್ಡ ಸಂಖ್ಯೆಯ ಎಫ್.ಎಂ. ಚಾನಲ್‌ಗಳಿವೆ. ಆದರೂ, ಇವು ದೇಶದ ಶೇ.60ರಷ್ಟು ಭಾಗ ಮಾತ್ರ ತಲುಪುತ್ತಿವೆ ಎಂದವರು ತಿಳಿಸಿದ್ದಾರೆ. ಪ್ರಸಾರ (3ನೇ ಪುಟಕ್ಕೆ)

## ಅಶ್ವತ್ಥ ನಾರಾಯಣ ಹೇಳಿಕೆಗೆ ವಾಕ್ಸಮರ

### ಸ್ವಯಂ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳಲು ಆಗ್ರಹ

ಬೆಂಗಳೂರು, ಫೆ. 16 - ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ್ ನೀಡಿದ ಹೇಳಿಕೆ ವಿಧಾನಸಭೆಯಲ್ಲಿಂದು ಚರ್ಚೆಗೆ ಗ್ರಾಸವಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರ ನಡೆದು ಸದನವನ್ನು ಮುಂದೂಡಿದ ಪ್ರಸಂಗ ಜರುಗಿತು.

ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ವಿಷಯ ಪ್ರಸ್ತಾಪಿಸುತ್ತಿದ್ದಂತೆ ಮಧ್ಯೆ ಪ್ರವೇಶಿಸಿದ ಅಶ್ವತ್ಥ್‌ನಾರಾಯಣ್, ಮಂಡ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟಿಪ್ಪುಗೆ ಹೋಲಿಕೆ ಮಾಡಿದ್ದೇನೆ. ಕಾಂಗ್ರೆಸ್ ಸೋಲಿಸಬೇಕು ಎಂದು ಹೇಳಿದ್ದೇನೆ. ನನ್ನ ಮಾತಿನಿಂದ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದರು.

ಯುದ್ಧ ಕಾಲದಲ್ಲಿ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಅಂದು ಯುದ್ಧ ನಡೆಯುತ್ತಿತ್ತು. ಇಂದು ಚುನಾವಣೆ ನಡೆಯುತ್ತದೆ. ನಾನು ರಾಜಕೀಯ ಪರಿಭಾಷೆಯಲ್ಲಿ ಮಾತನಾಡಿದ್ದೇನೆಯೇ ಹೊರತು, ವೈಯಕ್ತಿಕವಾಗಿ ಅವರ ಬಗ್ಗೆ ದ್ವೇಷವಿಲ್ಲ ಎಂದು ಸ್ಪಷ್ಟಪಡಿಸಿದರು.


ಸಿದ್ದರಾಮಯ್ಯ ಅವರ ಬಗ್ಗೆ ನನಗೆ ಗೌರವವಿದೆ. ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯವಿದೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಎಂದು ನಮ್ಮ (2ನೇ ಪುಟಕ್ಕೆ)

## 65 ಮೀರಿದವರೂ ಅಂಗದಾನ ಪಡೆಯಲು ಅನುಮತಿ

### ದೇಶಾದ್ಯಂತ ಏಕರೂಪದ ಅಂಗದಾನ ನೀತಿಗೆ ಕೇಂದ್ರದ ಕ್ರಮ

ನವದೆಹಲಿ, ಫೆ. 16 – ಅಂಗ ದಾನಕ್ಕೆ ಸಂಬಂಧಿಸಿದ ನಿಯಮಗಳಿಗೆ ಬದಲಾವಣೆ ತಂದಿರುವ ಕೇಂದ್ರ ಸರ್ಕಾರ, 65 ವರ್ಷ ಮೀರಿದವರೂ ಸಹ ಅಂಗದಾನ ಪಡೆಯಲು ಅವಕಾಶ ಕಲ್ಪಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಅಂಗದಾನದ ಅಗತ್ಯವಿರುವ ರೋಗಿಗಳಿಗೆ ರಾಜ್ಯಗಳು ಯಾವುದೇ ಮಿತಿ ಹೇರಬಾರದು. ಅವರು ಯಾವ ರಾಜ್ಯದಲ್ಲಿ ಬೇಕಾದರೂ (3ನೇ ಪುಟಕ್ಕೆ)


manipalhospitals
LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

19ನೇ ಫೆಬ್ರುವರಿ, 2023
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ
ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580


ದಿ|| ಪಾಂಡುರಂಗಪ್ಪ ಬೊಮ್ಮಯ್ಯ ವೇರ್ಣೇಕರ್ ಇವರ ಆರನೇ ಪುತ್ರ

## ಶ್ರೀ ಅಶೋಕ ಪಾಂಡುರಂಗ ವೇರ್ಣೇಕರ್ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ
6ನೇ ಮುಖ್ಯ ರಸ್ತೆ, 6ನೇ ತಿರುವಿನಲ್ಲಿ ವಾಸವಾಗಿರುವ

**ಶ್ರೀ ಅಶೋಕ ಪಾಂಡುರಂಗ ವೇರ್ಣೇಕರ್ (PBV)**

ಇವರು, ದಿನಾಂಕ : 16.02.2023ರ ಗುರುವಾರ ರಾತ್ರಿ 08.15 ಗಂಟೆಗೆ ದೈವಾಧೀನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 17.02.2023ರ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ದಿವಂಗತರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಸಂಜೆ 5 ಗಂಟೆಗೆ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತ :

**ಮೆ|| ಪಾಂಡುರಂಗ ಬೊಮ್ಮಯ್ಯ ವೇರ್ಣೇಕರ್**
ಕುಟುಂಬ ವರ್ಗದವರು, ದಾವಣಗೆರೆ.

# ಕ್ರಿಕೆಟಿಗ ಪೃಥ್ವಿ ಷಾ ಮೇಲೆ ಹಲ್ಲೆ

## ದೂರು ದಾಖಲು, ಸಪ್ನಾ ಗಿಲ್ ಬಂಧನ

ಮುಂಬೈ, ಫೆ. 16 – ಭಾರತೀಯ ಕ್ರಿಕೆಟ್ ತಂಡದ ಆಟಗಾರ ಪೃಥ್ವಿ ಷಾ ಅವರ ಮೇಲೆ ಹಲ್ಲೆ ನಡೆಸಿ, ಅವರ ಕಾರಿನ ಮೇಲೆ ಬೇಸ್‌ಬಾಲ್ ಬ್ಯಾಟ್‌ನಿಂದ ದಾಳಿ ನಡೆಸಿದ ಘಟನೆ ಮುಂಬೈನ ಐಷಾರಾಮಿ ಹೋಟೆಲ್ ಹೊರಗೆ ನಡೆದಿದೆ.

ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್ ಆಗಿರುವ ಸಪ್ನಾ ಗಿಲ್ ಹಾಗೂ ಗೆಳೆಯರು ಸೇರಿಕೊಂಡು ಬುಧವಾರ ಬೆಳಗಿನ ಜಾವ ಈ ಕೃತ್ಯ ಎಸಗಿದ್ದಾರೆ. ಘಟನೆಯ ನಂತರ ಗಿಲ್ ಬಂಧಿಸಲಾಗಿದೆ. ಆಕೆಯ ಗೆಳೆಯ ಶೋಭಿತ್ ಠಾಕೂರ್ ಹಾಗೂ ಇತರರ ವಿರುದ್ಧ ಗಲಾಟೆ ಹಾಗೂ ಹಣ ವಸೂಲಿಯ ಪ್ರಕರಣಗಳು ದಾಖಲಿಸಲಾಗಿವೆ.

ಘಟನೆ ನಡೆದಾಗ ಗಿಲ್ ಹಾಗೂ ಠಾಕೂರ್ ಇಬ್ಬರೂ ಪಾನಮತ್ತ ಸ್ಥಿತಿಯಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪೃಥ್ವಿ ಷಾ ಅವರ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೋ ಒಂದು ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸೆಲ್ಫಿ ತೆಗೆಸಿಕೊಳ್ಳುವಂತೆ ಪೃಥ್ವಿ ಷಾಗೆ ಗಿಲ್ ಕೇಳಿದ್ದರು. ಅದರಂತೆ ಷಾ ಸೆಲ್ಫಿ ತೆಗೆಸಿಕೊಂಡಿದ್ದರು. ಇನ್ನಷ್ಟು ಸೆಲ್ಫಿಗೆ ಒತ್ತಾಯಿಸಿದಾಗ ಷಾ ನಿರಾಕರಿಸಿದರು. ಇದು ಜಗಳಕ್ಕೆ ಕಾರಣವಾಯಿತು. ಗಿಲ್ ಹಾಗೂ ಠಾಕೂರ್ ಇಬ್ಬರೂ ಹೋಟೆಲ್‌ನಿಂದ ಹೊರ ಹೋಗುವಂತೆ ಹೋಟೆಲ್ ವ್ಯವಸ್ಥಾಪಕರು ತಿಳಿಸಿದರು.

ಷಾ ಹಾಗೂ ಅವರ ಸ್ನೇಹಿತ ಆಶಿಶ್ ಯಾದವ್ ಅವರು ನಂತರದಲ್ಲಿ ಹೋಟೆಲ್‌ನಿಂದ ಹೊರ ಬಂದಿದ್ದಾರೆ. ಆ ವೇಳೆ ಗಿಲ್ ಹಾಗೂ ಜೊತೆಗಿದ್ದವರು ಬೇಸ್‌ಬಾಲ್ ಬ್ಯಾಟ್‌ನಿಂದ ಷಾ ವಾಹನದ ಗಾಜುಗಳನ್ನು ಒಡೆದಿದ್ದಾರೆ. ನಂತರ ಕ್ರಿಕೆಟಿಗ ಷಾ ಹಾಗೂ ಯಾದವ್ ಬೇರೊಂದು ಕಾರಿನಲ್ಲಿ ಅಲ್ಲಿಂದ ಹೊರ ಹೋಗಿದ್ದಾರೆ. ಅಲ್ಲಿಗೂ ಬಿಡದೇ ಗಿಲ್ ಮತ್ತಿತರರು ಬೆನ್ನತ್ತಿ ಬಂದು ಹಲ್ಲೆ ನಡೆಸಿದ್ದಾರೆ. ನಂತರ ಯಾದವ್ ಒಶಿವಾರ ಪೊಲೀಸ್ ಠಾಣೆಗೆ ತೆರಳಿದ್ದಾರೆ.

ಅಲ್ಲಿಗೆ ಬಂದ ಗಿಲ್ ಮತ್ತಿತರರು ಯಾದವ್ ಜೊತೆ ಜಗಳವಾಡಿದ್ದಾರೆ. 50 ಸಾವಿರ ರೂ. ಕೊಡದೇ ಹೋದರೆ ಸುಳ್ಳು ಪೊಲೀಸ್ ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದಾರೆ. ನಂತರ ಯಾದವ್ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ.

# ಧಾರ್ಮಿಕ ಆಚರಣೆ ವೆಚ್ಚ ಕಡಿತಗೊಳಿಸಬೇಕು

## ಮಾದಾರ ಚನ್ನಯ್ಯ ಜಯಂತಿ ಸಮಾರಂಭದಲ್ಲಿ ಶ್ರೀ ಷಡಾಕ್ಷರಮುನಿ ಸ್ವಾಮೀಜಿ ಕರೆ



ಹರಿಹರ, ಫೆ. 16 - ಮಾದಿಗ ಸಮುದಾಯದವರು ಧಾರ್ಮಿಕ ಆಚರಣೆಗಳಿಗೆ ಮಾಡುತ್ತಿರುವ ಖರ್ಚು - ವೆಚ್ಚಗಳನ್ನು ಕಡಿತಗೊಳಿಸಬೇಕೆಂದು ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಮಠದ ಶ್ರೀ ಷಡಾಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ ಕಿವಿ ಮಾತು ಹೇಳಿದರು.

ನಗರದ ಭಾಗೀರಥಿ ಕಲ್ಯಾಣ ಮಂಟಪದಲ್ಲಿ ಗುರುವಾರ ಮಾದಾರ ಚನ್ನಯ್ಯ ಜಯಂತಿ ನಿಮಿತ್ತ ಆಯೋಜಿಸಿದ್ದ ಜನ ಜಾಗೃತಿ ಸಮಾವೇಶ ಹಾಗೂ ಸರಳ ಸಾಮೂಹಿಕ ವಿವಾಹ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಧಾರ್ಮಿಕ ವಿಧಿ - ವಿಧಾನಗಳಿಗೆ ದುಡಿಮೆಯ ಬಹುಭಾಗ ಕಳೆಯುತ್ತೀರಿ. ಇದರ ಬದಲು ಉತ್ತಮ ಬಟ್ಟೆ ಧರಿಸಿರಿ, ಪೌಷ್ಟಿಕ ಆಹಾರ ಸೇವಿಸಿ, ಆರೋಗ್ಯ ಚೆನ್ನಾಗಿ ಇಟ್ಟುಕೊಳ್ಳಿ, ಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡಿರಿ ಎಂದು ಸಲಹೆ ನೀಡಿದರು.

ತಾ.ಪಂ., ಜಿ.ಪಂ., ಶಾಸಕ ಸ್ಥಾನದ ಟಿಕೆಟ್ ಕೊಡಿ ಎಂದು ವಿವಿಧ ಪಕ್ಷಗಳವರನ್ನು ಬೇಡುವುದು ಬಿಟ್ಟು ಬಿಡಿ. ಮೊದಲು ಸಮಾಜವನ್ನು ಸಂಘಟಿಸಿರಿ. ಸಂಘಟನೆ ಗಟ್ಟಿಯಾಗಿದ್ದರೆ, ಸಮಾಜದ ಜನ ಶಿಕ್ಷಣವಂತರಾಗಿದ್ದರೆ ಪಕ್ಷಗಳ ನಾಯಕರೇ ನಿಮ್ಮ ಮನೆ ಬಾಗಿಲಿಗೆ ಬಂದು ಟಿಕೆಟ್ ನೀಡುತ್ತಾರೆ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಮೊಳಕಾಲ್ಮೂರು ತಾಲ್ಲೂಕು ಸಿದ್ದಯ್ಯನಕೋಟೆಯ ವಿಜಯ ಮಹಾಂತೇಶ್ವರ ಶಾಖಾಮಠದ ಬಸವಲಿಂಗ ಶ್ರೀ ಮಾತನಾಡಿ, ರಾಜ್ಯದಲ್ಲೆಡೆ ದೊಡ್ಡ ಸಂಖ್ಯೆಯಲ್ಲಿ ಮಾದಿಗ ಸಮಾಜವಿದೆ. ನೀವು ಸಂಘಟಿತರಾದರೆ ಸಮಾಜವು ಮುಖ್ಯ ವಾಹಿನಿಗೆ ಬರಲು ಸಾಧ್ಯ ಎಂದರು.

ಉದ್ಘಾಟನೆ ನೆರವೇರಿಸಿದ ಮಾಜಿ ಸಚಿವ ಹೆಚ್.ಆಂಜನೇಯ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿ ಕಂಡ ಕಲ್ಯಾಣ ರಾಜ್ಯದ ಕಲ್ಪನೆ ಜಾರಿಯಾಗಬೇಕಿದೆ. ಶೋಷಣೆ ಸಮಾಜದಲ್ಲಿ ಸಂಪೂರ್ಣ ನಿರ್ಮೂಲನೆಯಾಗಬೇಕಿದೆ ಎಂದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ಸಂವಿಧಾನ ಬದಲಿಸುವ ಮಾತುಗಳನ್ನಾಡಲಾಗುತ್ತಿದೆ. ಈಗಿರುವ ಆಡಳಿತಗಾರರು ಸಂವಿಧಾನದ ಸ್ವರೂಪವನ್ನು ಬದಲಿಸಿದರೆ ನಾವೆಲ್ಲಾ ಮತ್ತೆ 75 ವರ್ಷ ಹಿಂದಿನ ದುಸ್ಥಿತಿಗೆ ಮರಳಬೇಕಾಗುತ್ತದೆ ಎಂದರು.

ಸಮಾರಂಭದಲ್ಲಿ 12 ಜೋಡಿ ದಂಪತಿಗಳು ವಿವಾಹ ಬಂಧನಕ್ಕೆ ಒಳಗಾದರು.

ಕಾಂಗ್ರೆಸ್ ಮುಖಂಡರಾದ ಎ.ಗೋವಿಂದ ರೆಡ್ಡಿ, ಡಾ.ಹೆಚ್.ಮಹೇಶ್ವರಪ್ಪ, ಎಂ.ನಾಗೇಂದ್ರಪ್ಪ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಆಯುಕ್ತ ಹೆಚ್. ಆರ್.ತೇಗನೂರ, ನಿವೃತ್ತ ಇಇ ಬಿ.ಗುರುನಾಥ, ದಲಿತ ಮುಖಂಡರಾದ ಹೆಚ್.ಮಲ್ಲೇಶ್, ಡಿ. ಹನುಮಂತಪ್ಪ, ಜಿಪಂ ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ, ತಾ.ಪಂ ಮಾಜಿ ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ಮಾದಿಗ ಸಮಾಜದ ಪದಾಧಿಕಾರಿಗಳಾದ ಎಂ.ಬಿ.ಅಣ್ಣಪ್ಪ, ಎಂ.ಎಸ್. ಆನಂದ ಕುಮಾರ್, ಎ.ಕೆ. ಶಿವರಾಮ್, ಎಂ.ಎಸ್. ಶ್ರೀನಿವಾಸ್, ಗಂಗಾಧರ ಹೆಚ್.ಕೊಂಡಜ್ಜಿ, ಹೆಚ್. ಶಿವಪ್ಪ, ಜಿ.ಹೆಚ್.ಸಿದ್ದಾರೂಢ, ನಾಗೇಂದ್ರಪ್ಪ, ಕೊಕ್ಕನೂರು ಬಿ.ಡಿ. ಬಸವರಾಜಪ್ಪ, ಆರ್. ಮಂಜುನಾಥ್ ಇತರರಿದ್ದರು.

# ನಾನೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ : ಪರಮೇಶ್ವರ್



ತುಮಕೂರು, ಫೆ. 16 – ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆದ್ದರೆ, ನಾನೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಪಕ್ಷದ ಹಿರಿಯ ನಾಯಕ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಐದು ಬಾರಿ ಶಾಸಕರಾಗಿರುವ ಪರಮೇಶ್ವರ್, ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕರೆ ಸಿದ್ಧವಿರುವುದಾಗಿ ತಿಳಿಸಿದ್ದಾರೆ. ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಈಗಾಗಲೇ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ಅಧಿಕಾರಕ್ಕಾಗಿಯೇ ರಾಜಕೀಯದಲ್ಲಿ ಇರುತ್ತಾರೆ. ನಮ್ಮ ಪಕ್ಷದಲ್ಲಿ ಮುಖ್ಯಮಂತ್ರಿ ಹುದ್ದೆಗೆ ಹತ್ತು ಆಕಾಂಕ್ಷಿಗಳಿದ್ದಾರೆ, ನಾನು ಅದರಲ್ಲಿ ಒಬ್ಬ ಎಂದವರು ತಿಳಿಸಿದ್ದಾರೆ.

ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮ ಉದ್ದೇಶವಾಗಿದೆ. ನಂತರದ ನಿರ್ಧಾರ ಹೈಕಮಾಂಡ್‌ಗೆ ಸೇರಿದ್ದು. ಅವರು ತೆಗೆದುಕೊಳ್ಳುವ ನಿರ್ಧಾರವನ್ನು ನಾವೆಲ್ಲರೂ ಪಾಲಿಸುತ್ತೇವೆ ಎಂದೂ ಅವರು ತಿಳಿಸಿದರು.

## ವಾಲ್ಮೀಕಿ ಶ್ರೀಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ದಾವಣಗೆರೆ, ಫೆ.16- ರಾಜನಹಳ್ಳಿ ಶ್ರೀ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಚಿತ್ರನಟ ಸುದೀಪ್ ಆಗಮಿಸುತ್ತಾರೆಂದು ಸುಳ್ಳು ಹೇಳಿ, ಅಭಿಮಾನಿಗಳ ಗಲಾಟೆಗೆ ಹಾಗೂ ಪೊಲೀಸರು ಲಾಠಿ ಚಾರ್ಜ್ ಮಾಡಲು ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರೇ ಕಾರಣ ಎಂದು ವಕೀಲ ಗುಮ್ಮನೂರು ಮಲ್ಲಿಕಾರ್ಜುನ್ ಆರೋಪಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮೀಜಿ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಇದೇ ಫೆ.16ರಂದು ಬೆಳಿಗ್ಗೆ 12 ಗಂಟೆಗೆ ದಾವಣಗೆರೆ ಅಂಬೇಡ್ಕರ್ ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳು, ರಾಜ್ಯಪಾಲರು, ಮಾನವ ಹಕ್ಕುಗಳ ಆಯೋಗಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

# ಅಶ್ವತ್ಥ ನಾರಾಯಣ ಹೇಳಿಕೆಗೆ ವಾಕ್ಸಮರ

(1ನೇ ಪುಟದಿಂದ) ಕಾರ್ಯಕರ್ತರಿಗೆ ಕರೆ ಕೊಟ್ಟಿದ್ದೆ. ಟಿಪ್ಪು ಒಬ್ಬ ಮತಾಂಧ. ಆತನನ್ನು ಯಾರು ವೈಭವೀಕರಿಸುತ್ತಾರೋ ಅಂಥವರನ್ನು ಸೋಲಿಸಲು ಹೇಳಿದ್ದೆ ಎಂದರು.

ಕಳೆದ ಹಲವು ದಿನಗಳಿಂದ ಟಿಪ್ಪುವನ್ನು ಅತಿಯಾಗಿ ವೈಭವೀಕರಿಸಲಾಗುತ್ತಿದೆ. ಹೀಗಾಗಿ ಹೇಳಿದ್ದೇನೆ ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು. ಅಲ್ಲದೇ, ಟಿಪ್ಪು ಒಬ್ಬ ನರಹಂತಕ. ಅಂಥವರನ್ನು ವೈಭವೀಕರಿಸಿದವರಿಗೆ ಇದೇ ರೀತಿ ಹೇಳಬೇಕಾಗುತ್ತದೆ ಎಂದರು. ಆಗ ಸದನದಲ್ಲಿ ಕೋಲಾಹಲ, ಗದ್ದಲ, ಮಾತಿನ ಚಕಮಕಿ, ಆರೋಪ, ಪ್ರತ್ಯಾರೋಪ ನಡೆದು ಯಾರು ಏನು ಹೇಳುತ್ತಿದ್ದಾರೆ ಎಂಬದು ತಿಳಿಯದ ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು.

ಅಶ್ವತ್ಥನಾರಾಯಣ ಬೆಂಬಲಕ್ಕೆ ಸಚಿವ ಸುಧಾಕರ್ ಮತ್ತಿತರರು ಧಾವಿಸಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಯು.ಟಿ.ಖಾದರ್, ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆ ತರುವ, ಅಶಾಂತಿ ಸೃಷ್ಟಿಸುವ ಹೇಳಿಕೆಗಳನ್ನು ಸಚಿವರು ಮತ್ತು ಶಾಸಕರು ನೀಡುತ್ತಿದ್ದಾರೆ. ಉಳ್ಳಾಲದಿಂದ ಹಿಡಿದು, ಚಿಕ್ಕಮಗಳೂರು ಮತ್ತಿತರೆ ಕಡೆ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದರು.

ಸಂವಿಧಾನಬದ್ಧವಾಗಿ ಪ್ರಮಾಣ ವಚನ ಸ್ವೀಕರಿಸಿದ ಸಚಿವರ ಬಾಯಿಯಿಂದಲೇ ಇಂತಹ ಹೇಳಿಕೆಗಳು ಬಂದರೆ, ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವವರು ಯಾರು. ಬಿಜೆಪಿಯವರು ಕೋಮು ಭಾವನೆಗಳನ್ನು ಕೆರಳಿಸಿ ನಮ್ಮನ್ನು ಪ್ರಚೋದನೆ ಮಾಡುತ್ತಿದ್ದರು. ನಾವು ಅವರ ಬಲೆಯಲ್ಲಿ ಬೀಳಬಾರದು ಎಂದು ಹೇಳಿಕೆ ಕೊಟ್ಟಿರಲಿಲ್ಲ. ಆದರೆ, ರಾಜ್ಯದ ಒಬ್ಬ ಜನನಾಯಕ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ವಿರುದ್ಧ ಹೇಳಿಕೆ ನೀಡಿದಾಗ ಸುಮ್ಮನಿರಬೇಕೇ? ಎಂದು ಪ್ರಶ್ನಿಸಿದರು.

ಈ ದೇಶದಲ್ಲಿ ಕಲಿಯದೇ ಇರುವವರಿಗಿಂತ ಕಲಿತವರಿಂದಲೇ ಹೆಚ್ಚು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಅಶ್ವತ್ಥನಾರಾಯಣ ಅವರು ಮೂಲತಃ ವೈದ್ಯರು. ಅವರ ಬಾಯಿಂದ ಇಂತಹ ಮಾತುಗಳು ಬರಬಾರದು. ಬಾಯಿಗೆ ಬಂದಂತೆ ಕೆಲವರು ಮಾತನಾಡುತ್ತಿದ್ದಾರೆ. ಮೀರ್ ಸಾಧಿಕ್ ವಂಶಸ್ಥರು ತುಂಬಾ ಜನರಿದ್ದಾರೆ. ನೇರಾ ನೇರ ಹೋರಾಟ ಮಾಡದೇ ಹಿಂದಿನಿಂದ ಜನರನ್ನು ಪ್ರಚೋದನೆ ಮಾಡುತ್ತಾರೆ. ಅದರಲ್ಲೂ ಹಿರಿಯ ಸಚಿವರ ಬಾಯಲ್ಲಿ ಇಂತಹ ಮಾತು ಬರಬಾರದಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಶ್ವತ್ಥ ನಾರಾಯಣ ಅವರ ವಿರುದ್ಧ ಸ್ವಯಂ ದೂರು ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು. ಸುಪ್ರೀಂ ಕೋರ್ಟ್ ಕೂಡ ದ್ವೇಷ ಭಾಷಣ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟಿದೆ ಎಂದರು.

# ಈಶ್ವರ ಖಂಡ್ರೆ ಏರಿದ ಮಾತು, ಸಭಾಧ್ಯಕ್ಷರಿಗೆ ಏರಿದ ಬಿ.ಪಿ.

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಕುರಿತು ನೀಡಿದ ಹೇಳಿಕೆ ಬಗ್ಗೆ ಸಚಿವ ಅಶ್ವತ್ಥನಾರಾಯಣ ಉತ್ತರಿಸುತ್ತಿದ್ದಾಗ ಈಶ್ವರ ಖಂಡ್ರೆ ಏರಿದ ಧ್ವನಿಯಲ್ಲಿ ಮಾತಾಡಿದ್ದು, ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಕೆರಳಿಸಿತು.

ಪದೇ ಪದೇ ಕುಳಿತುಕೊಳ್ಳಿ ಎಂದು ಸೂಚನೆ ನೀಡಿದ ಹೊರತಾಗಿಯೂ, ಖಂಡ್ರೆ ಮಾತನಾಡುವುದನ್ನು ನಿಲ್ಲಿಸಲಿಲ್ಲ. ಇದರಿಂದ ಸಹನೆ ಕಳೆದುಕೊಂಡ ಕಾಗೇರಿ ಅವರು, ನೀವು ಹಿರಿಯರು, ಈ ರೀತಿ ನಡೆದುಕೊಳ್ಳುವುದು ನಿಮಗೆ ಶೋಭೆ ತರುವುದಿಲ್ಲ. ಸಚಿವರಾಗಿ ಕೆಲಸ ಮಾಡಿದ ಅನುಭವವಿದೆ. ಸಭಾಧ್ಯಕ್ಷರು ಹೇಳಿದ ಮೇಲೂ ನೀವು ಪೀಠಕ್ಕೆ ಗೌರವ ಕೊಡದೆ ಮಾತನಾಡುತ್ತಿದ್ದೀರಿ. ಇದೇನಾ ನೀವು ಸಭಾಧ್ಯಕ್ಷರಿಗೆ ಕೊಡುವ ಗೌರವ? ಎಂದು ಪ್ರಶ್ನಿಸಿದರು.

ನಾನು ಇದುವರೆಗೆ ಸಹನೆ ಕಳೆದು ಕೊಳ್ಳದೇ ಮಾತನಾಡಿದ್ದೇನೆ. ಪೂರ್ಣ ಅಧಿಕಾರ ಚಲಾಯಿಸುವ ಅವಕಾಶ ಮಾಡಿಕೊಡಬೇಡಿ. ನನ್ನನ್ನು ಅನಗತ್ಯವಾಗಿ ಎಳೆದು ಮಾತನಾಡಿಸುತ್ತೀರಿ. ಕೇಳುವ ಸೌಜನ್ಯವಿಲ್ಲವೆ ಪದೇ ಪದೇ ಇದೇ ರೀತಿ ಮುಂದುವರೆದರೆ, ಸದನದಿಂದ ಹೊರ ಹಾಕಬೇಕಾಗುತ್ತದೆ ಎಂದು ಸಭಾಧ್ಯಕ್ಷರು ಎಚ್ಚರಿಕೆ ನೀಡಿದರು.

ಸಭಾಧ್ಯಕ್ಷರ ಈ ಹೇಳಿಕೆಗೆ ಕಾಂಗ್ರೆಸ್ ಸದಸ್ಯರಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು. ಪ್ರಿಯಾಂಕ ಖರ್ಗೆ ಅವರು, ಇದೇನು ಸರ್ವಾಧಿಕಾರವೇ ನಾವು ಈ ಸದನದ ಸದಸ್ಯರು. ಮಾತನಾಡುವ ಹಕ್ಕು ನಮಗೂ ಇದೆ. ಈ ರೀತಿ ಸೂಚಿಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಆಗ ಸಭಾಧ್ಯಕ್ಷರು, ನಿಮಗೆ ಮಾತ್ರ ಬಿ.ಪಿ. ಬರುವುದಿಲ್ಲ. ನನಗೂ ಕೂಡ ಬಿ.ಪಿ. ಬರುತ್ತದೆ. ನಿಮಗೆ ಕೊನೆ ಬಾರಿ ಎಚ್ಚರಿಕೆ ಕೊಡುತ್ತಿದ್ದೇನೆ. ಹೊರಗೆ ಹಾಕಬೇಕೇ? ಎಂದು ಪ್ರಶ್ನಿಸಿ, ನಿಮ್ಮಂಥವರು ಆಯ್ಕೆಯಾಗಿ ಬರುವುದು ಈ ಸದನಕ್ಕೆ ಅವಮಾನ ಎಂದು ಹೇಳುತ್ತಿದ್ದಂತೆ ಸದನದಲ್ಲಿ ಕೋಲಾಹಲ ಉಂಟಾಯಿತು. ಸಭಾಧ್ಯಕ್ಷರ ಮಾತಿಗೆ ತೀವ್ರ ಆಕ್ಷೇಪಿಸಿದ ಕಾಂಗ್ರೆಸ್ ಸದಸ್ಯರು, ಬಾಲ್ಕಿ ಜನರಿಗೆ ಮಾಡಿದ ಅವಮಾನವಿದು ಎಂದು ವಿರೋಧಿಸಿ ಸದನದ ಬಾವಿಗಿಳಿದು ಧರಣಿ ನಡೆಸಲು ಮುಂದಾದರು. ಸದನ ಸಹಜ ಸ್ಥಿತಿಗೆ ಬಾರದ ಕಾರಣ ಸಭಾಧ್ಯಕ್ಷರು ಸದನದ ಕಾರ್ಯ ಕಲಾಪವನ್ನು 15 ನಿಮಿಷ ಕಾಲ ಮುಂದೂಡಿದರು.

# ಚಿತ್ರದುರ್ಗ : ಶಿವರಾತ್ರಿ ಮಹೋತ್ಸವಕ್ಕೆ ಚಾಲನೆ



ಚಿತ್ರದುರ್ಗ, ಫೆ. 16- ಇಲ್ಲಿನ ಶ್ರೀ ಸದ್ಗುರು ಕಬೀರಾನಂದ ಸ್ವಾಮಿ ಆಶ್ರಮದಲ್ಲಿ ಐದು ದಿನಗಳ ಕಾಲ ಜರುಗುವ 93ನೇ ಮಹಾಶಿವರಾತ್ರಿ ಮಹೋತ್ಸವವನ್ನು ಮಂಗಳವಾರ ಸಂಜೆ ಆದಿಚುಂಚನಗಿರಿ ಮಠದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ದೀಪ ಬೆಳಗಿಸಿ, ಉದ್ಘಾಟಿಸಿದರು.

ಬೀದರ್‌ನ ಚಿದಂಬರ ಆಶ್ರಮದ ಶ್ರೀ ಡಾ. ಶಿವಕುಮಾರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠದ ಕೆ.ಆರ್. ನಗರ ಶಾಖಾಮಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ಕುಂಬಳಗೋಡು ಶಾಖಾ ಮಠದ ಶ್ರೀ ಡಾ. ಪ್ರಕಾಶನಾಥ ಸ್ವಾಮೀಜಿ, ಉತ್ಸವ ಸಮಿತಿ ಅಧ್ಯಕ್ಷ ಜಿ.ಎಸ್. ಅನಿತ್ ಕುಮಾರ್, ಓಂಕಾರಮೂರ್ತಿ, ದಾಸೋಹಿ ದ್ಯಾಮೇಗೌಡ್ರು ಮತ್ತಿತರರು ಈ ವೇಳೆ ಹಾಜರಿದ್ದರು.

ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ ಮಹೋತ್ಸವದ ನೇತೃತ್ವ ವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ನೂತನ ಗುರುಸದನ ಹಾಗೂ ಸಭಾ ಮಂಟಪವನ್ನು ಉದ್ಘಾಟಿಸಲಾಯಿತು.

ಈ ವೇಳೆ ಆದಿಚುಂಚನಗಿರಿ ಗೋಶಾಲೆಗೆ ಹುಲ್ಲು ದಾನಿಗಳಾದ ನಿಟ್ಟೂರಿನ ಕೆ. ಸಂಜೀವಮೂರ್ತಿ, ಅಬ್ಬಾರಾವ್, ಎಸ್.ಜಿ. ಪ್ರಭುದೇವ್, ಜಿಗಳಿಯ ಜಿ. ಆನಂದಪ್ಪ, ಪತ್ರಕರ್ತ ಪ್ರಕಾಶ್, ನಂದಿತಾವರೆಯ ಬಿ.ಪಿ. ಸಂತೋಷ್ ಅವರನ್ನು ಶ್ರೀಗಳು ಸನ್ಮಾನಿಸಿ, ಗೌರವಿಸಿದರು.

# ಬಾತಿ ಗ್ರಾಮದಲ್ಲಿ ಶ್ರೀ ವಿಠ್ಠಲ-ರುಕ್ಮಿಣಿ ದಿಂಡಿ ಉತ್ಸವ



ದಾವಣಗೆರೆ, ಫೆ. 16- ದೊಡ್ಡಬಾತಿ ಗ್ರಾಮದಲ್ಲಿ ಶ್ರೀ ವಿಠ್ಠಲ ರುಕ್ಮಿಣಿ ದೇವರ ದಿಂಡಿ ಉತ್ಸವ ಇಂದು ನಡೆಯಿತು. ಶ್ರೀ ಹ.ಭ.ಪ. ಭಾನುದಾಸ್ ಸರ್ವದೆ ಅವರಿಂದ ಕೀರ್ತನೆಯಲ್ಲಿ ಎಲ್ಲರೂ ದೇವರ ನಾಮಸ್ಮರಣೆ ಮಾಡಬೇಕು. ಸಾಧು, ಸಂತರು ತುಂಬಾ ಕಠೋರ ಸಾಧನೆ ಮಾಡಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆದುಕೊಂಡು ಹೋದರೆ ಸಾಕು ನಾವು ಧನ್ಯರಾಗುತ್ತೇವೆ ಎಂದು ಶ್ರೀ ಭಾನುದಾಸ್ ಮಹಾರಾಜ ಸ್ವಾಮಿಗಳು ನುಡಿದರು.

ಭಜನಾ ಕಾರ್ಯಕ್ರಮವು ಚಂದ್ರಕಾಂತ ವಾದೋನಿ (ದಾವಣಗೆರೆ) ಅವರ ನೇತತ್ವದಲ್ಲಿ ಜರುಗಿತು. ಗ್ರಾ.ಪಂ. ಸದಸ್ಯ ಕೆ.ಜಿ. ಉಮೇಶ್, ಸಿದ್ದಪ್ಪ, ಗಣೇಶ್, ರಾಮಚಂದ್ರ ತೇಲ್ಕರ್, ಮಂಜುನಾಥ್ ಮಾಂಡ್ರೆ, ವಿಠ್ಠಲ್ ವಂಡರ್ಕರ್ ಎಲ್ಲಾ ವಾರಕರಿ ಸದ್ಭಕ್ತರು ಉಪಸ್ಥಿತರಿದ್ದರು.

# ವಿಶ್ವ ಕನ್ನಡ ಸಮ್ಮೇಳನ: ಬಜೆಟ್‌ನಲ್ಲಿ ಅನುದಾನ ಕೋರಿ ಪತ್ರ

ಬೆಂಗಳೂರು, ಫೆ.16 ದಾವಣಗೆರೆಯಲ್ಲಿ ಮೂರನೇ ವಿಶ್ವಕನ್ನಡ ಸಮ್ಮೇಳನ ಆಯೋಜಿಸಲು ಅನುವಾಗುವಂತೆ ನಾಳೆ ದಿನಾಂಕ 17 ರಂದು ಮಂಡನೆಯಾಗಲಿರುವ ರಾಜ್ಯ ಆಯ-ವ್ಯಯ ಪತ್ರದಲ್ಲಿ ಅನುದಾನವನ್ನು ಕಾಯ್ದಿರಿಸುವಂತೆ ಮುಖ್ಯಮಂತ್ರಿಗಳಿಗೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಕೋರಿದ್ದಾರೆ.

ಮೊದಲನೇ ಹಾಗೂ ಎರಡನೇ ವಿಶ್ವ ಕನ್ನಡ ಸಮ್ಮೇಳನವು ಮೈಸೂರು ಹಾಗೂ ಬೆಳಗಾವಿಯಲ್ಲಿ ನಡೆದಂತೆ ಮೂರನೇ ವಿಶ್ವ ಕನ್ನಡ ಸಮ್ಮೇಳನವನ್ನು ವಿದ್ಯಾಕಾಶಿ ಹಾಗೂ ಸಾಂಸ್ಕೃತಿಕ ನಗರ ವಂದೇ ಹೆಸರುವಾಸಿಯಾಗಿರುವ ದಾವಣಗೆರೆಯಲ್ಲಿಯೇ ಆಯೋಜಿಸಲು ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದರು. ಆ ಹಿನ್ನೆಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ ವಾಮದೇವಪ್ಪ ಸಭಾಪತಿಗಳಿಗೆ ಮನವಿ ಮಾಡಿದ್ದರು. ಅವರ ಮನವಿಗೆ ಸ್ಪಂದಿಸಿದ ಹೊರಟ್ಟಿಯವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ.

ಜಿಲ್ಲೆ ಹಾಗೂ ಸುತ್ತಮುತ್ತಲಿನ ಸಾಹಿತಿಗಳು, ವಿದ್ವಾಂಸರು, ಕಲಾಸಕ್ತರು, ಹಾಗೂ ಜನಪ್ರತಿನಿಧಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಾವಣಗೆರೆ ನಗರದಲ್ಲಿಯೇ ಮೂರನೇ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸಲು ರಾಜ್ಯ ಮುಂಗಡ ಪತ್ರದಲ್ಲಿ ಅನುದಾನವನ್ನು ಕಾಯ್ದಿರಿಸುವಂತೆ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ಕೋರಿರುವುದು ಸಂತೋಷವನ್ನು ಉಂಟು ಮಾಡಿದೆ ಎಂದು ಬಿ. ವಾಮದೇವಪ್ಪ ತಿಳಿಸಿದ್ದಾರೆ.

# ರಾಜ್ಯದಲ್ಲಿ 204 ದಶಲಕ್ಷ ಯುನಿಟ್ ವಿದ್ಯುತ್ ಬೇಡಿಕೆ

**ಸಚಿವ ನಾಗೇಶ್**

ಬೆಂಗಳೂರು, ಫೆ. 16 - ರಾಜ್ಯದಲ್ಲಿ ಪ್ರತಿದಿನ 204.86 ದಶಲಕ್ಷ ಯುನಿಟ್ ವಿದ್ಯುತ್ ಬೇಡಿಕೆ ಇದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ರಾಜಾ ವೆಂಕಟಪ್ಪ ನಾಯಕ ಅವರ ಪ್ರಸ್ತಾವಕ್ಕೆ ಇಂಧನ ಸಚಿವ ಸುನಿಲ್ ಕುಮಾರ್ ಅವರ ಪರವಾಗಿ ಉತ್ತರಿಸಿದ ಸಚಿವರು, ಏಪ್ರಿಲ್ 2022ರಿಂದ 2023ರ ಜನವರಿ ಅಂತ್ಯವರೆಗೆ 204.86 ದಶಲಕ್ಷ ಯುನಿಟ್ ಉತ್ಪಾದನೆಯಾ ಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ವಿವಿಧ ಮೂಲಗಳಿಂದ ರೈತರಿಗೆ ವಿತರಣೆ ಮಾಡುವುದಾಗಿ ತಿಳಿಸಿದರು. ವಿವಿಧ ಮೂಲಗಳ ಜಲವಿದ್ಯುತ್‌ನಿಂದ 11247.27 ದಶಲಕ್ಷ ಯೂನಿಟ್ ವಿದ್ಯುತ್ ಪಡೆದುಕೊಳ್ಳಲಾಗುತ್ತಿದೆ.

ಶಾಖೋತ್ಪನ್ನ ಮೂಲದಿಂದ 13129.51 ದಶಲಕ್ಷ ಯೂನಿಟ್ ಪಡೆದುಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ 13153.79 ದಶಲಕ್ಷ ಯೂನಿಟ್ ತೆಗೆದುಕೊಳ್ಳಲಾಗುತ್ತಿದೆ.

ಅಸಾಂಪ್ರದಾಯಿಕ ಮೂಲಗಳಿಂದ 23727.34 ದಶಲಕ್ಷ ಯೂನಿಟ್, ಜಿಂದಾಲ್‌ನಿಂ ದ 798.83 ದಶಲಕ್ಷ ಯೂನಿಟ್‌ಗಳನ್ನು ಖರೀದಿಸಲಾಗುತ್ತಿದೆ. ಒಟ್ಟು 62687.54 ದಶಲಕ್ಷ ಯೂನಿಟ್‌ಗಳನ್ನು ರಾಜ್ಯ ಸರ್ಕಾರ ಸದ್ಯಕ್ಕೆ ತೆಗೆದುಕೊಳ್ಳುತ್ತಿದೆ. ಒಟ್ಟಾರೆ ರಾಜ್ಯದಲ್ಲಿ ವಿದ್ಯುತ್ ಕೊರತೆ ಎಳ್ಳಷ್ಟೂ ಇಲ್ಲ ಎಂದು ಸ್ಪಷ್ಟಪಡಿಸಿದರು.

# ವಿವಿಧೆಡೆಯಲ್ಲಿ ಕಳ್ಳತನ : ನಾಲ್ವರ ಬಂಧನ

ದಾವಣಗೆರೆ, ಫೆ.16- ಹರಿಹರ ಹಾಗೂ ರಾಣೇಬೆನ್ನೂರಿನಲ್ಲಿ ಕಳ್ಳತನ ಮಾಡಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು 10.82 ಲಕ್ಷ ರೂ. ಬೆಲೆಯ 269.5 ಗ್ರಾ.ಬಂ ಬಂಗಾರದ ಆಭರಣ, ಎರಡು ಬೈಕ್ ಸೇರಿ ಒಟ್ಟು 1.17 ಲಕ್ಷ ರೂ. ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.


ಹರಿಹರ ನಗರ ಠಾಣೆ ವ್ಯಾಪ್ತಿಯ ಜೆ.ಸಿ. ಬಡಾವಣೆ, ಲೋಹರ್ ಮೊಹಲ್ಲಾ, ದೊಡ್ಡಬೀದಿ ಹಾಗೂ ರಾಣೇಬೆನ್ನೂರು ನಗರ ಠಾಣೆ ವ್ಯಾಪ್ತಿಯ ಗೌಳಿಗಲ್ಲಿ ಗೂಡ್ ಶೆಡ್ ರಸ್ತೆಯಲ್ಲಿ ಇವರು ಮನೆ ಕಳ್ಳತನ ಮಾಡಿದ್ದರು.

## ಹ್ಯಾಳೇದ ನಾಗಪ್ಪ ನಿಧನ



ದಾವಣಗೆರೆ ನರಸರಾಜಪೇಟೆ ವಾಸಿ,
**ಶ್ರೀ ಹ್ಯಾಳೇದ ನಾಗಪ್ಪ**
**ಅಧ್ಯಕ್ಷರು, ಶ್ರೀ ಕೆರೆಹೊನ್ನಮ್ಮ ವಿದ್ಯಾಸಂಸ್ಥೆ (ರಿ).,**
ಅಣಜಿ, ಇವರು ದಿನಾಂಕ 16.02.2023ರ ಗುರುವಾರ ಬೆಳಗಿನ ಜಾವ 4.00ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ, ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 16.02.2023ರ ಗುರುವಾರ ಸಂಜೆ 4 ಗಂಟೆಗೆ ನಗರದ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
ದುಃಖತಪ್ತ ಕುಟುಂಬ ವರ್ಗ- **ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು. ಮೊ : 91135 69559**

## 3ನೇ ವರ್ಷದ ಪುಣ್ಯಸ್ಮರಣೆ



ಲಿಂ॥ ಶ್ರೀಮತಿ ರುದ್ರಮ್ಮ

**ಲಿಂ॥ ಶ್ರೀಮತಿ ರುದ್ರಮ್ಮನವರು**
**(ಲಿಂ॥ ರುದ್ರಪ್ಪನವರ ಧರ್ಮಪತ್ನಿ)**
ಖ್ಯಾತ ಪಾರಂಪರಿಕ ನಾಟಿ ವೈದ್ಯರು, ಹೆಬ್ಬಾಳು.
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದವು. ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ.
**ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಕರೆಕೆಂಚಪ್ಪ ವಂಶಸ್ಥರು, ಹೆಬ್ಬಾಳು.**

## ಡಿ.ಗಂಗಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು ಸೇವಾನಗರ ಗ್ರಾಮದ ನಿವಾಸಿ
**ಡಿ.ಗಂಗಮ್ಮ**
ಇವರು ದಿನಾಂಕ 16.02.2023 ರ ಗುರುವಾರ ರಾತ್ರಿ 8.36ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 85 ವರ್ಷವಾಗಿದ್ದು, ಐವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು, ಅಪಾರ ಬಂಧು-ಬಳಗ ಹಾಗೂ ಭಕ್ತ ವೃಂದದವರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 17-02-2023 ರ ಶುಕ್ರವಾರ ಮಧ್ಯಾಹ್ನ 12 ಕ್ಕೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಸೇವಾನಗರ ಗ್ರಾಮದಲ್ಲಿ ನೆರವೇರಿಸಲಾಗುವುದು.
**ದು:ಖತಪ್ತ ಕುಟುಂಬ ವರ್ಗ ಮೋ: 9740579053**

## ಪವಾಡರಂಗವ್ವನಹಳ್ಳಿ ರವಿಕುಮಾರ್ ನಿಧನ



ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಪವಾಡರಂಗವ್ವನಹಳ್ಳಿ ಗ್ರಾಮದ ವಾಸಿ
**ಗೌಡ್ರ ಈಶ್ವರಪ್ಪನವರ ದ್ವಿತೀಯ ಪುತ್ರ**
**ಜಿ.ಇ. ರವಿಕುಮಾರ**
ಇವರು ದಿನಾಂಕ 16.02.2023ರ ಗುರುವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 50 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.02.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಪವಾಡರಂಗವ್ವನಹಳ್ಳಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
**ಗೌಡ್ರ ವಂಶಸ್ಥರು, ಬಂಧು-ಮಿತ್ರರು ಹಾಗೂ ಪವಾಡರಂಗವ್ವನಹಳ್ಳಿ ಗ್ರಾಮಸ್ಥರು. ಮೊ : 80889 02802**

## ಸುಮನ್ ಹೆಚ್. ಬಂಡ್ವಾಳ್ಕರ್ ನಿಧನ



ದಾವಣಗೆರೆ ಯರಗುಂಟೆ ಅಶೋಕ ನಗರ ವಾಸಿ
**ಹರೀಶ್ ಎಸ್. ಬಂಡ್ವಾಳ್ಕರ್**
ಇವರ ಧರ್ಮಪತ್ನಿ
**ಸುಮನ್ ಹೆಚ್. ಬಂಡ್ವಾಳ್ಕರ್**
ಇವರು ದಿನಾಂಕ 16.02.2023ರ ಗುರುವಾರ ಮಧಾಹ್ನ 4.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 33 ವರ್ಷ ವಯಸ್ಸಾಗಿತ್ತು.
ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.02.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಪಿ.ಬಿ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**
**ಮೊ : 85532 53861, 98444 23426**

## ಮಹೇಶ್ ಎಲ್.ಎಂ. ನಿಧನ



ದಾವಣಗೆರೆ ಕೆ.ಟಿ.ಜೆ. ನಗರ, 2ನೇ ಮೇನ್, 3ನೇ ಕ್ರಾಸ್ ವಾಸಿ ಪಶು ಇಲಾಖೆ ಹಿರಿಯ ಪ್ರಯೋಗಶಾಲೆ ತಂತ್ರಜ್ಞರಾದ ಮಹೇಶ್ ಎಲ್. ಎಂ. (50) ಇವರು ದಿನಾಂಕ: 16-2-2023 ರ ಗುರುವಾರ ಸಂಜೆ 4.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 17-2-2023 ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಚಿರಸ್ಮರಣೆ



**ದಿ॥ ಕೆ.ರಾಮಚಂದ್ರರಾವ್**
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ...
**ಪುತ್ರ, 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಗಂಡಗಾಳೆ ಬಂಧುಗಳು, ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್ ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**

# ಇಮಾಂ ಸಾಹೇಬರಂತಹ ರಾಜಕಾರಣಿಗಳು ಕಣ್ಮರೆ

## ಜಗಳೂರು: ಜೆಎಂ ಇಮಾಂ ಸ್ಮಾರಕ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೋ.ರು.ಚ ಕಳವಳ

ಜಗಳೂರು, ಫೆ. 16- ಸಂವಿಧಾನದ ಪಾವಿತ್ರ್ಯತೆ ಕಾಪಾಡಬೇಕಾದ ರಾಜಕಾರಣಿಗಳು ಇಂದು ಚೆಲ್ಲಾಟವಾಡುತ್ತಿದ್ದಾರೆ. ದಿ. ಇಮಾಂ ಸಾಹೇಬರಂತಹ ಮುತ್ಸದ್ದಿ ರಾಜಕಾರಣಿಗಳು ಕಣ್ಮರೆಯಾಗಿದ್ದಾರೆ ಎಂದು ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಹಾಗೂ ಜಾನಪದ ವಿದ್ವಾಂಸ ನಾಡೋಜ ಡಾ. ಗೋ.ರು. ಚನ್ನಬಸಪ್ಪ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಇಮಾಂ ಶಾಲಾ ಆವರಣದಲ್ಲಿ ಇಮಾಂ ಟ್ರಸ್ಟ್ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ 'ಜೆ.ಎಂ.ಇಮಾಂ ಸ್ಮಾರಕ ರಾಜ್ಯ ಪ್ರಶಸ್ತಿ ಪ್ರದಾನ' ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ದಿ.ಇಮಾಂ ಸಾಹೇಬರ ಮೇಲೆ ನನಗೆ ಅಪಾರ ಅಭಿಮಾನವಿದೆ. ಅವರು ಮೈಮನಗಳಲ್ಲಿ ಸದಾ ಜಾಗೃತಿ ಅಂತಃಪ್ರಜ್ಞೆಯಿಂದ ರಾಜಕೀಯ ಪರಿಪಕ್ವತೆ ಹೊಂದಿದ್ದರು. ಇಂದಿಗೂ ಅವರು ಜನಮಾನಸದ ಹೃದಯದಲ್ಲಿ ಉಳಿದಿದ್ದಾರೆ. ಇವರ ರಾಜಕೀಯ ವೃತ್ತಿ ಜೀವನ ಇಂದಿನ ರಾಜಕಾರಣಿಗಳಿಗೆ ಆದರ್ಶವಾಗಬೇಕು ಎಂದರು.

ವಿಧಾನ ಸಭೆಯಲ್ಲಿನ ಚರ್ಚೆಗಳು ಜನಸಾಮಾನ್ಯರು ತಲೆತಗ್ಗಿಸುವಂತಿವೆ. ಸಂವಿಧಾನದ ನಿರ್ದೇಶನಗಳನ್ನು ಪಾಲಿಸುತ್ತಿಲ್ಲ. ಇದು ದೇಶದ ಜನರ ದುರದೃಷ್ಟಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.



ಇಮಾಂ ಸಾಹೇಬರ ಸ್ಮರಣೆಯ ರಾಜ್ಯ ಪ್ರಶಸ್ತಿಗೆ ಭಾಜನರಾಗಿರುವ ರಂಜಾನ್ ದರ್ಗಾ ಅವರು ಧರ್ಮಾತೀತವಾಗಿ ಪ್ರಗತಿಪರ, ವೈಚಾರಿಕ ಸಾಹಿತ್ಯದಿಂದ ಮಾಧ್ಯಮ, ಸಾಮಾಜಿಕ ಹೋರಾಟದ ಸೇವೆಗೈದಿದ್ದು, ಅವರ ಸಂಶೋಧನಾ ಸಾಮರ್ಥ್ಯಗಳ ಬಗ್ಗೆ ಅವರು ರಚಿಸಿದ ಕೃತಿಗಳೇ ಸಾರುತ್ತವೆ. ದರ್ಗಾ ಅವರಿಗೆ ಇಮಾಂ ರಾಜ್ಯ ಪ್ರಶಸ್ತಿ ಪ್ರದಾನ ನನಗೆ ಸಂತಸ ತಂದಿದೆ ಎಂದು ಗೋ.ರು.ಚ. ಹೇಳಿದರು.

ಸಾಹಿತಿ ಹಾಗೂ ನಿವೃತ್ತ ಪ್ರಾಧ್ಯಾಪಕ ರಹಮತ್ ತರೀಕೆರೆ ಮಾತನಾಡಿ, ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದ ರಾಜಕಾರಣಿ ಇಮಾಂ ಸಾಹೇಬರಾಗಿದ್ದರು. ಸಾಂಸ್ಕೃತಿಕ ವ್ಯಕ್ತಿತ್ವ ಹೊಂದಿದ ಮುತ್ಸದ್ಧಿ ರಾಜಕಾರಣಿಗಳಾಗಿ ಸೇವೆಗೈದ ಎಸ್.ನಿಜಲಿಂಗಪ್ಪ, ದೇವರಾಜ ಅರಸು, ಜವಾಹರ್ ಲಾಲ್ ನೆಹರೂ ಅವರ ಸಾಲಿನಲ್ಲಿ ಇಮಾಂ ಸಾಹೇಬರೊಬ್ಬರಾಗಿದ್ದಾರೆ. ಇವರು ಜನರ ನೆಮ್ಮದಿಯ ಬದುಕಿನ ಚಿಂತನೆಯುಳ್ಳವರಾಗಿದ್ದರು. ರಚನಾತ್ಮಕ ವಿರೋಧ ಪಕ್ಷದ ನಾಯಕರಾಗಿದ್ದರು ಎಂದು ಸ್ಮರಿಸಿದರು.

ಪ್ರಗತಿಪರ ಸಾಹಿತಿ ರಂಜಾನ್ ದರ್ಗಾ

**ಧರ್ಮಾತೀತವಾಗಿ ದೇಶದಲ್ಲಿ ಇಮಾಂ ಅವರು ಇಮ್ಮಣ್ಣವಾಗಿರುವುದೇ ಭಾರತದ ಬಹುತ್ವ ಸಂಸ್ಕೃತಿ. ದೇಶದಲ್ಲಿನ ಮುಸ್ಲಿಂ ಸಮುದಾಯ ಇಮಾಂ ಸಾಹೇಬರ ಅನುಯಾಯಿಗಳಾಗಬೇಕಿದೆ. ಹಲವು ಧರ್ಮಗಳಿರುವ ಭಾರತದಲ್ಲಿ ಬಹು ಸಂಸ್ಕೃತಿ ಉಳಿದು ಬಹುತ್ವ ರಾಷ್ಟ್ರವಾಗಬೇಕಿದೆ.**

**- ರಂಜಾನ್ ದರ್ಗಾ,** ಜೆ.ಎಂ. ಇಮಾಂ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರಗತಿಪರ ಲೇಖಕ

ಅವರ ಕಾವ್ಯ ಮೀಮಾಂಸೆಯ ಆಶಯದಂತೆ ದೇಶದಲ್ಲಿ ಬಂಡವಾಳಶಾಹಿತ್ವ ಪರ ಆಡಳಿತ ಕೊನೆಗೊಳ್ಳಬೇಕಿದೆ ಎಂದರು.

ಜೆ.ಎಂ.ಇಮಾಂ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರಗತಿಪರ ಲೇಖಕ ರಂಜಾನ್ ದರ್ಗಾ ಮಾತನಾಡಿ, ನಾನು ಬಾಲ್ಯದಿಂದಲೇ ಇಮಾಂ ಸಾಹೇಬರ ಪರಿಚಯ ಕಂಡವನು. ಅವರೇ ನನ್ನ ಸಾಮಾಜಿಕ ಸೇವೆ ಸಾಹಿತ್ಯಲೋಕದ ಪಾದಾರ್ಪಣೆಗೆ ಸ್ಫೂರ್ತಿ ಎಂದರು.

ಮಹಾರಾಷ್ಟ್ರದ ಶಾಹು ಮಹಾರಾಜರ ಆಳ್ವಿಕೆ ಮಾದರಿಯಲ್ಲಿ ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣರಾಜ್ ಒಡೆಯರ್ ಅವರ ಆಡಳಿತವಿತ್ತು. ಈ ವೇಳೆ ಇಮಾಂ ಸಾಹೇಬರು ಸಚಿವರಾಗಿ ನಿಸ್ವಾರ್ಥ ಸೇವೆಯಿಂದ ಪಂಚವಾರ್ಷಿಕ ಯೋಜನೆ ಜಾರಿಗೊಳಿಸಿದರು. ನೀರಾವರಿ, ಶಿಕ್ಷಣ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅಲ್ಲದೆ ಜಗಳೂರಿನ ನಿವಾಸಕ್ಕೆ ನಾಲ್ವಡಿ ಕೃಷ್ಣರಾಜ್ ಒಡೆಯರ್ ಆಗಮಿಸಿದ ಇತಿಹಾಸವಿದೆ. ಇದು ಅವರ ಘನತೆ ಎತ್ತಿಹಿಡಿಯುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಇಮಾಂ ಟ್ರಸ್ಟ್ ಅಧ್ಯಕ್ಷ ಜೆ.ಕೆ.ಹುಸೇನ್ ಮಿಯ್ಯಾ ಸಾಬ್, ಪಿಂಜಾರ ಸಮಾಜದ ರಾಜ್ಯಾಧ್ಯಕ್ಷ ಜಲೀಲ್ ಸಾಬ್, ಹೆಚ್.ಇಬ್ರಾಹಿಂ ಟ್ರಸ್ಟ್ ಅಧ್ಯಕ್ಷ ದಾದಾಖಲಂದರ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಸಾಹಿತಿ ಎನ್.ಟಿ.ಎರ್ರಿಸ್ವಾಮಿ, ನಿವೃತ್ತ ಪ್ರಾಂಶುಪಾಲ ಯಾದವ ರೆಡ್ಡಿ, ಡಾ.ಬಿ.ಎ. ರಾಜಪ್ಪ, ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್, ಆಡಳಿತ ಅಧಿಕಾರಿ ಜೆ.ಕೆ.ಮುನ್ನ, ನಿವೃತ್ತ ಉಪನ್ಯಾಸಕ ತಿಮ್ಮರಾಜ್, ಡಿ.ಸಿ. ಮಲ್ಲಿಕಾರ್ಜುನ್ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## 29 ಪ್ರಕರಣಗಳಲ್ಲಿ ಸುಳ್ಳು ಜಾಮೀನು ಪ್ರಮಾಣ ಪತ್ರ ನೀಡಿ ವಂಚನೆ: ಬಂಧನ

ದಾವಣಗೆರೆ, ಫೆ.16- ನಗರದ ವಿವಿಧ ನ್ಯಾಯಾಲಯಗಳಲ್ಲಿ 29 ಪ್ರಕರಣಗಳಲ್ಲಿ ಜಾಮೀನು ಭದ್ರತೆಗಾಗಿ ಆರೋಪಿಗಳಿಗೆ ಸುಳ್ಳು ಜಾಮೀನು ಪ್ರಮಾಣ ಪತ್ರ ನೀಡಿದ ಹರಪನಹಳ್ಳಿ ತಾಲ್ಲೂಕು ಯಡಿಹಳ್ಳಿ ಗ್ರಾಮದ ಬಸವರಾಜಪ್ಪ ಎಂಬಾತನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಪ್ರಕರಣವೊಂದರಲ್ಲಿ ಜಾಮೀನುದಾರರ ವಿಚಾರಣೆ ನಡೆಯುವ ವೇಳೆ ಈತ ಈ ಪ್ರಕರಣಕ್ಕೆ ಮಾತ್ರ ತಾನು ಜಾಮೀನಿಗಾಗಿ ಜಮೀನು ಪಹಣಿಯನ್ನು ಭದ್ರತೆಗಾಗಿ ನೀಡಿರುತ್ತೇನೆ. ಬೇರಾವುದೇ ನ್ಯಾಯಾಲಯದಲ್ಲಿ ನೀಡಿರುವುದಿಲ್ಲ ಎಂದು ಹೇಳಿಕೆ ನೀಡಿದ್ದ.

ನ್ಯಾಯಾಧೀಶರು ಶ್ಯೂರಿಟಿ ಸೆಕ್ಯೂರಿಟಿ ಮ್ಯಾನೇಜ್‌ಮಂಟ್ ಅಪ್ಲಿಕೇಶನ್‌ನಲ್ಲಿ ಪರಿಶೀಲಿಸಿದಾಗ, ಈ ವ್ಯಕ್ತಿ 29 ಪ್ರಕರಣಗಳಲ್ಲಿ ಜಾಮೀನು ಭದ್ರತೆಗಾಗಿ ಇದೇ ಪಹಣಿಯನ್ನು ನೀಡಿದ್ದು ಕಂಡು ಬಂದಿದೆ.

ನ್ಯಾಯಾಧೀಶರು ಜಾಮೀನುದಾರ ಬಸವರಾಜ ಅವರನ್ನು ಪೊಲೀಸ್ ವಶಕ್ಕೆ ನೀಡಿ ಕ್ರಮ ಜರುಗಿಸಲು ಸೂಚಿಸಿದ್ದರ ಹಿನ್ನೆಲೆಯಲ್ಲಿ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಂಗದಾನ ಪಡೆಯಲು ಅನುಮತಿ

**(1ನೇ ಪುಟದಿಂದ)** ಅಂಗದಾನ ಪಡೆಯಲು ನೋಂದಾಯಿಸಿಕೊಳ್ಳಲು ಅನುಮತಿ ನೀಡಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶಿಫಾರಸ್ಸು ಮಾಡಿದೆ. ಈ ರೀತಿಯ ನೋಂದಣಿಗಾಗಿ ರಾಜ್ಯಗಳು ಯಾವುದೇ ಶುಲ್ಕ ಪಡೆಯಬಾರದು ಎಂದೂ ಸಚಿವಾಲಯ ರಾಜ್ಯಗಳಿಗೆ ತಿಳಿಸಿದೆ. ತೆಲಂಗಾಣ, ಮಹಾರಾಷ್ಟ್ರ, ಗುಜರಾತ್ ಹಾಗೂ ಕೇರಳಗಳು ನೋಂದಣಿಗಾಗಿ 5ರಿಂದ 10 ಸಾವಿರ ರೂ.ಗಳ ಶುಲ್ಕ ಪಡೆಯುತ್ತಿವೆ.

ಅಲ್ಲದೇ, ಅಂಗದಾನಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ಒಂದೇ ರೀತಿಯ ಮಾರ್ಗಸೂಚಿ ಜಾರಿಗೆ ತರಲು ಆರೋಗ್ಯ ಸಚಿವಾಲಯ ಕ್ರಮ ತೆಗೆದುಕೊಳ್ಳುತ್ತಿದೆ.

ಏಕರೂಪದ ಕಾನೂನು ಜಾರಿಗೆ ತಂದರೆ ರೋಗಿಗಳು ಯಾವುದೇ ಆಸ್ಪತ್ರೆಯಲ್ಲಿ ಅಂಗ ಕಸಿಗಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗಲಿದೆ.

## ನಾಳೆ ಭಾರತಕ್ಕೆ 12 ಚೀತಾಗಳ ಆಗಮನ

ನವದೆಹಲಿ, ಫೆ. 16 – ದಕ್ಷಿಣ ಆಫ್ರಿಕಾದಿಂದ 12 ಚೀತಾಗಳನ್ನು ನಾಳೆ ಫೆ.18ರ ಶನಿವಾರದಂದು ತರಲಾಗುವುದು ಎಂದು ಕೇಂದ್ರ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್ ತಿಳಿಸಿದ್ದಾರೆ.

ಭಾರತದಲ್ಲಿ ಮರೆಯಾಗಿರುವ ಚೀತಾಗಳನ್ನು ಮತ್ತೆ ಬೆಳೆಸುವ ಸಲುವಾಗಿ ಕೇಂದ್ರ ಸರ್ಕಾರ ಪ್ರಯತ್ನ ನಡೆಸಿದೆ. ಈ ಹಿಂದೆ



ನಮೀಬಿಯಾದಿಂದ ಎಂಟು ಚಿರತೆಗಳನ್ನು ತರಿಸಲಾಗಿತ್ತು. ಅವುಗಳನ್ನು ಮಧ್ಯ ಪ್ರದೇಶದ ಕುನೋ ರಾಷ್ಟ್ರೀಯ ಅಭಯಾರಣ್ಯದಲ್ಲಿ ಇರಿಸಲಾಗಿದೆ. ಕುನೋದಲ್ಲಿರುವ ಚೀತಾಗಳು ಮೂರ್ನಾಲ್ಕು ದಿನಗಳಿಗೊಮ್ಮೆ ಬೇಟೆ ಆಡುತ್ತಿವೆ. ಅವುಗಳ ಆರೋಗ್ಯ ಉತ್ತಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಯುಪಡೆಯ ಎಸಿ-17 ವಿಮಾನದ ಮೂಲಕ ಚೀತಾಗಳನ್ನು ದಕ್ಷಿಣ ಆಫ್ರಿಕಾದಿಂದ ತರಲಾಗುತ್ತಿದೆ. ಅವುಗಳಿಗಾಗಿ ಕುನೋ ಅಭಯಾರಣ್ಯದಲ್ಲಿ 10 ಕ್ವಾರಂಟೈನ್ ಕೇಂದ್ರಗಳನ್ನು ರೂಪಿಸಲಾಗಿದೆ.

ವಿಶ್ವದಲ್ಲಿ 7 ಸಾವಿರದಷ್ಟು ಚೀತಾಗಳಿವೆ. ಇವುಗಳಲ್ಲಿ ಬಹುತೇಕವು ದಕ್ಷಿಣ ಆಫ್ರಿಕ, ನಮೀಬಿಯ ಹಾಗೂ ಬೋಟ್ಸವಾನಾಗಳಲ್ಲಿವೆ. ನಮೀಬಿಯಾದಲ್ಲಿ ವಿಶ್ವದಲ್ಲೇ ಅತಿ ಹೆಚ್ಚಿನ ಚೀತಾಗಳಿವೆ. ಬೇಟೆ ಹಾಗೂ ನೆಲೆಗಳ ನಾಶದ ಕಾರಣದಿಂದಾಗಿ ಭಾರತದಲ್ಲಿ ಚೀತಾಗಳ ಸಂತತಿ ನಾಶವಾಗಿದೆ. ಈ ಹಿಂದೆ 1948ರಲ್ಲಿ ಭಾರತದ ಕೊನೆಯ ಚೀತಾವನ್ನು ಛತ್ತೀಸ್‌ಘಡದಲ್ಲಿ ಕಾಣಲಾಗಿತ್ತು.

# ಪಂಜಾಬ್ ಮಾದರಿ ಫಲಿತಾಂಶ ನಿರೀಕ್ಷೆ

## ಆಮ್ ಆದ್ಮಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ



ದಾವಣಗೆರೆ, ಫೆ.16- ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪಂಜಾಬ್ ಮಾದರಿ ಫಲಿತಾಂಶವನ್ನೇ ನಿರೀಕ್ಷಿಸುವುದಾಗಿ ಆಮ್ ಆದ್ಮಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ ಹೇಳಿದ್ದಾರೆ.

ಆಮ್ ಆದ್ಮಿ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲ 224 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಹೇಳಿದರು.

ಆಮ್ ಆದ್ಮಿ ಪಕ್ಷ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದ್ದು, ಪಂಜಾಬ್ ಮಾದರಿ ಫಲಿತಾಂಶವನ್ನೇ ರಾಜ್ಯದಲ್ಲೂ ನಿರೀಕ್ಷಿಸುತ್ತಿದ್ದೇವೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ದುರಾಡಳಿತದಿಂದ ಜನ ಬೇಸತ್ತಿದ್ದಾರೆ. ಆಮ್ ಆದ್ಮಿ ಪಕ್ಷದ ಬಗ್ಗೆ ಸಾರ್ವಜನಿಕರಿಂದ ಅದ್ಭುತ ಸ್ಪಂದನೆ ವ್ಯಕ್ತವಾಗಿದೆ. ಹೀಗಾಗಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಆಪ್ ಸ್ಪರ್ಧಿಸಲಿದೆ ಎಂದರು.

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕ್ರಿಮಿನಲ್ ಹಿನ್ನೆಲೆ ಹೊಂದಿರುವ ವ್ಯಕ್ತಿಗಳಿಗೆ ಯಾವ ಕಾರಣಕ್ಕೂ ಟಿಕೆಟ್ ನೀಡುವುದಿಲ್ಲ. ಮಾರ್ಚ್ ಮೊದಲ ವಾರದಲ್ಲಿ ಎಲ್ಲ ಕ್ಷೇತ್ರಗಳ ಅಭ್ಯರ್ಥಿಗಳ ಅಂತಿಮ ಪಟ್ಟಿ ಹೊರಬರಲಿದೆ ಎಂದರು.

ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಮಾ.4 ರಂದು ಮಧ್ಯಾಹ್ನ 12 ಗಂಟೆಗೆ ಆಮ್ ಆದ್ಮಿ ಪಕ್ಷದ ಬೃಹತ್ ಸಮಾವೇಶ ನಡೆಯಲಿದ್ದು, ಅಂದಿನ ಕಾರ್ಯಕ್ರಮದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾಗವಹಿಸಲಿದ್ದಾರೆ. ದಾವಣಗೆರೆ ಸಮಾವೇಶದ ಮೂಲಕ ಪಕ್ಷ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಪ್ರಚಾರ ಆರಂಭಿಸಲಿದೆ. ಸಮಾವೇಶದಲ್ಲಿ 15000ಕ್ಕೂ ಅಧಿಕ ಆಪ್ ಕಾರ್ಯಕರ್ತರು, 20000ಕ್ಕೂ ಹೆಚ್ಚು ಸಾರ್ವಜನಿಕರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಸಂಚಿತ್ ಸಹಾನಿ ತಿಳಿಸಿದರು.

ಜನಸಾಮಾನ್ಯರಿಗೆ ಕೈಗೆಟುಕುವಂತೆ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಅದೇ ರೀತಿ ರಾಜ್ಯದಲ್ಲೂ ಈ ಎರಡೂ ಅಂಶಗಳನ್ನು ಮುಂದಿಟ್ಟುಕೊಂಡು ಮತದಾರರ ಎದುರು ಹೋಗಲಿದ್ದೇವೆ ಎಂದು ಹೇಳಿದರು.

ಸಭೆಯಲ್ಲಿ ಪಕ್ಷದ ಜಂಟಿ ಕಾರ್ಯದರ್ಶಿ ಗುರುಮೂರ್ತಿ, ಜಿಲ್ಲಾಧ್ಯಕ್ಷ ಚಂದ್ರು ಬಸವಂತಪ್ಪ, ಕಾರ್ಯದರ್ಶಿ ಸಿ.ಆರ್. ಅರುಣ್‌ಕುಮಾರ್, ಆದಿಲ್ ಖಾನ್, ವೈ. ಎನ್. ಮಲ್ಲಿನಾಥ್, ಗಣೇಶ್ ದುರ್ಗದ್, ಗೋವಿಂದರಾಜ್, ಇಂದೂಧರ್ ಕೂಲಂಬಿ, ಶ್ರೀಧರ ಪಾಟೀಲ್, ರಾಜಶೇಖರ್, ಕಂಚಿಕೆರೆ ಜಯಣ್ಣ, ಪ್ರೊ. ಧರ್ಮಾನಾಯಕ್ ಇತರರಿದ್ದರು.

## ಜಯನಗರದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ



ದಾವಣಗೆರೆ, ಫೆ.16- ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಜಯನಗರ 'ಸಿ' ಬ್ಲಾಕ್ ಕದಂಬ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕ್ಯಾಂಡಲ್ ಬೆಳಗಿಸುವ ಮೂಲಕ ಹುತಾತ್ಮ ಯೋಧರಿಗೆ ನಮನಗಳನ್ನು ಸಲ್ಲಿಸಲಾಯಿತು. ನಿವೃತ್ತ ಉಪನ್ಯಾಸಕ ಬಿಕ್ಕೂಜಪ್ಪ ಮಾತನಾಡಿ, ದೇಶಕ್ಕಾಗಿ ಹೋರಾಡುವ ಸೈನಿಕರನ್ನು ಗೌರವಿಸಬೇಕು. ಅವರ ಕುಟುಂಬ ವರ್ಗಕ್ಕೆ ಇನ್ನೂ ಹೆಚ್ಚಿನ ರೀತಿಯ ಸಹಕಾರದ ಅಗತ್ಯವಿದೆ ಎಂದು ಹೇಳಿದರು. ಅಧ್ಯಕ್ಷ ಅಂಜನಪ್ಪ ಮಾತನಾಡಿ, ಯುವಕರು ಹೆಚ್ಚಿನ ರೀತಿಯಲ್ಲಿ ಸೈನ್ಯ ಸೇರಿ ದೇಶ ರಕ್ಷಣೆಗೆ ಕಂಕಣಬದ್ಧರಾಗುವಂತೆ ಕರೆ ನೀಡಿದರು. ಪಿ.ಎಸ್. ನಾಗರಾಜ್, ಸುರೇಶ್ ಹೆಚ್. ಇತರರು ಈ ಸಂದರ್ಭದಲ್ಲಿದ್ದರು.

## ಹರಿಹರದಲ್ಲಿ ಸಂತ ಸೇವಾಲಾಲ್ ಜಯಂತಿ ಆಚರಣೆ



ಹರಿಹರ, ಫೆ. 16 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಸಂತ ಸೇವಾಲಾಲ್ ಜಯಂತಿ ಆಚರಣೆಯನ್ನು ತಾಲ್ಲೂಕು ಆಡಳಿತದ ವತಿಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರೇಡ್ 2 ತಹಶೀಲ್ದಾರ್ ಶಶಿಧರಯ್ಯ, ಆರ್.ಐ. ಮಂಜುನಾಥ್, ವಿ.ಎ. ಹೇಮಂತ್ ಕುಮಾರ್, ಜಗದೀಶ್ ಬಾವಿಕಟ್ಟಿ, ಡಾ. ಸಿದ್ದೇಶ್, ಉಮೇಶ್ ಉಪಸ್ಥಿತರಿದ್ದರು.

## ಕೇಂದ್ರದಿಂದ ಅತ್ಯುತ್ತಮ ಪ್ರವಾಸ ಗ್ರಾಮ ಸ್ಪರ್ಧೆ

ನವದೆಹಲಿ, ಫೆ. 16 – ಪ್ರವಾಸೋದ್ಯಮಕ್ಕೆ ಅತ್ಯುತ್ತಮವಾದ ಗ್ರಾಮವನ್ನು ಶೋಧಿಸಲು ಕೇಂದ್ರ ಸರ್ಕಾರ ಸ್ಪರ್ಧೆಯೊಂದನ್ನು ಆಯೋಜಿಸಿದೆ. ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ ಅವರ ಉಪಸ್ಥಿತಿಯಲ್ಲಿ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ ಸ್ಪರ್ಧೆಗೆ ಚಾಲನೆ ನೀಡಲಾಗಿದೆ. ಈ ಸ್ಪರ್ಧೆ ರಾಷ್ಟ್ರ ಮಟ್ಟದಲ್ಲಿ ನಡೆಯಲಿದೆ.

## ರೇಡಿಯೋಗಳ ಹರಾಜಿಗೆ ಕೇಂದ್ರದ ನಿರ್ಧಾರ

**(1ನೇ ಪುಟದಿಂದ)** ಮೂಲಭೂತ ಸೌಲಭ್ಯ ಹಾಗೂ ಜಾಲದ ಅಭಿವೃದ್ಧಿ (ಬಿ.ಐ.ಎನ್.ಡಿ.) ಯೋಜನೆಯ ಮೂಲಕ ಪ್ರಸಾರ ಭಾರತಿ ವಿಸ್ತಾರ ಹೆಚ್ಚಿಸಲು ಕೇಂದ್ರ ಸರ್ಕಾರ 2,500 ಕೋಟಿ ರೂ.ಗಳ ಯೋಜನೆ ಹೊಂದಿದೆ. ಐ.ಐ.ಟಿ. - ಕಾನ್‌ಪುರ ಹಾಗೂ ಸಂಖ್ಯಾ ಲ್ಯಾಬ್‌ಗಳು ಜೊತೆಯಾಗಿ ದೆಹಲಿ ಕರ್ತವ್ಯ ಪಥದಲ್ಲಿ ಟ್ರಾನ್ಸ್‌ಮೀಟರ್‌ಗಳನ್ನು ಅಳವಡಿಸಿವೆ. ಇವುಗಳ ಮೂಲಕ ಟಿವಿ ಸಿಗ್ನಲ್‌ಗಳನ್ನು ನೇರವಾಗಿ ಮೊಬೈಲ್‌ಗಳಿಗೆ ತಲುಪಿಸಬಹುದು ಎಂದೂ ಚಂದ್ರ ತಿಳಿಸಿದರು. ಇದು ಆಸಕ್ತಿಕರ ಬೆಳವಣಿಗೆ ಯಾಗಿದೆ. ಈ ಮೂಲಕ ಟಿ.ವಿ. ಮಾಧ್ಯಮವನ್ನು ನೇರವಾಗಿ ಮೊಬೈಲ್‌ಗಳಿಗೆ ತಲುಪಿಸಬಹುದು. ಸಿಗ್ನಲ್ ಪಡೆಯಲು ಮೊಬೈಲ್ ಬಳಕೆದಾರರು ವಿಶೇಷ ಡಾಂಗಲ್ ಅಳವಡಿಸಿಕೊಳ್ಳಬೇಕಾಗುತ್ತದೆ ಎಂದು ಚಂದ್ರ ಹೇಳಿದರು.

# ಬಿಎಸ್ಸೆನ್ನೆಲ್: 4ಜಿ ಜೊತೆಗೆ 5ಜಿ ಸಹ ಒದಗಿಸಲು ಸಿದ್ಧತೆ

ದಾವಣಗೆರೆ, ಫೆ. 16 - ಬಿ.ಎಸ್.ಎನ್.ಎಲ್. ವರ್ಷಾಂತ್ಯದ ವೇಳೆಗೆ 4ಜಿ ಸೇವೆ ವ್ಯಾಪಕವಾಗಿ ಆರಂಭಿಸಲಿದೆ. 5ಜಿ ಸ್ಪೆಕ್ಟ್ರಮ್ ದೊರಕಿದ ತಕ್ಷಣವೇ ಆ ಸೇವೆಯನ್ನೂ ಆರಂಭಿಸಲು ಸಿದ್ಧತೆ ನಡೆದಿದೆ ಎಂದು ಚಿತ್ರದುರ್ಗ - ದಾವಣಗೆರೆ ಟೆಲಿಕಾಂ ಜಿಲ್ಲೆಯ ಪ್ರಧಾನ ವ್ಯವಸ್ಥಾಪಕ ಡಿ.ಎಂ. ತ್ರಿಪಾಠಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 4ಜಿ ಹಾಗೂ 5ಜಿ ಎರಡೂ ಸೇವೆ ಒಟ್ಟಿಗೇ ಒದಗಿಸುವ ತಂತ್ರಜ್ಞಾನ ಪಡೆಯಲಾಗುತ್ತಿದೆ. ಹೀಗಾಗಿ ಬಿ.ಎಸ್.ಎನ್.ಎಲ್. 5ಜಿ ತಂತ್ರಜ್ಞಾನ ಒದಗಿಸುವುದು ತಡವಾಗದು ಎಂದು ಹೇಳಿದರು. ಬಿ.ಎಸ್.ಎನ್.ಎಲ್. ಚೇತರಿಕೆಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಖಾಸಗಿ ವಲಯದ ಟೆಲಿಕಾಂ ಸೇವೆಗಳಲ್ಲಿ ಏಕಸ್ವಾಮ್ಯ ಹೊಂದುವುದನ್ನು ಸರ್ಕಾರ ಬಯಸುವುದಿಲ್ಲ. ಬಿ.ಎಸ್.ಎನ್.ಎಲ್. ಖಾಸಗಿ ಸಹಭಾಗಿತ್ವಕ್ಕೆ ಆದ್ಯತೆ ನೀಡುವ ಮೂಲಕ ಕಾರ್ಯನಿರ್ವಹಿಸುತ್ತಿದೆ. ವರ್ಷಾಂತ್ಯದ ಒಳಗೆ ಸಂಸ್ಥೆ ಲಾಭದಾಯಕವಾಗಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಹರಿಹರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಎಫ್.ಟಿ.ಟಿ.ಹೆಚ್. ಸೇವೆ ಆರಂಭಿಸಲಾಗಿದೆ. ಈಗಾಗಲೇ ತಾಲ್ಲೂಕಿನ ಗ್ರಾಮಗಳಲ್ಲಿ 450 ಸಂಪರ್ಕ ನೀಡಲಾಗಿದೆ. ಪ್ರತಿ ಗ್ರಾಮದಲ್ಲೂ ಕನಿಷ್ಠ 50 ಸಂಪರ್ಕ ನೀಡುವ ಗುರಿ ಇದೆ ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಎಸ್.ಎನ್.ಎಲ್. ಉಪ ಪ್ರಧಾನ ವ್ಯವಸ್ಥಾಪಕ ಪಿ.ಕೆ. ಗೋಪಾಲ್, ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಕೆ. ಜನಾರ್ಧನ್, ಎಂ. ಕಾಂತರಾಜ್, ಮಾರುಕಟ್ಟೆ ಅಧಿಕಾರಿ ಎಂ. ಗುರುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

### ಭಾರತ ಉದ್ಯಮಿ ಯೋಜನೆ : ಬಿಎಸ್ಸೆನ್ನೆಲ್‌ನಿಂದ ಗ್ರಾಮೀಣ ಭಾಗದಲ್ಲಿ ಮೊದಲ ಬಾರಿಗೆ ಎಫ್.ಟಿ.ಟಿ.ಹೆಚ್. ಸೇವೆ

ಗ್ರಾಮಗಳಲ್ಲಿ ಎಫ್.ಟಿ.ಟಿ.ಹೆಚ್. (ಫೈಬರ್ ಟು ದ ಹೋಮ್) ಇಂಟರ್‌ನೆಟ್ ಹಾಗೂ ದೂರವಾಣಿ ಸೇವೆ ಒದಗಿಸಲಾಗುತ್ತಿದೆ. ಹಳ್ಳಿಗಳಲ್ಲಿ ಈ ಸೇವೆ ಒದಗಿಸುವ ಮೊದಲ ಸಂಸ್ಥೆ ಬಿ.ಎಸ್.ಎನ್.ಎಲ್ ಎಂದು ಚಿತ್ರದುರ್ಗ - ದಾವಣಗೆರೆ ಟೆಲಿಕಾಂ ಜಿಲ್ಲೆಯ ಪ್ರಧಾನ ವ್ಯವಸ್ಥಾಪಕ ಡಿ.ಎಂ. ತ್ರಿಪಾಠಿ ಹೇಳಿದರು. ಎಫ್.ಟಿ.ಟಿ.ಹೆಚ್. ಹೆಚ್ಚು ವೇಗದ ಹಾಗೂ ಗುಣಮಟ್ಟದ ಇಂಟರ್‌ನೆಟ್ ಸೇವೆ ಒದಗಿಸುತ್ತದೆ. ಖಾಸಗಿ ಸಹಭಾಗಿತ್ವದಲ್ಲಿ 'ಭಾರತ ಉದ್ಯಮಿ' ಎಂಬ ಯೋಜನೆಯ ಎಫ್.ಟಿ.ಟಿ.ಹೆಚ್. ಸೇವೆ ನೀಡಲಾಗುವುದು ಎಂದವರು ತಿಳಿಸಿದರು. ಕೇಬಲ್ ಆಪರೇಟರ್ ರೀತಿಯಲ್ಲಿ ಖಾಸಗಿಯವರು ಎಫ್.ಟಿ.ಟಿ.ಹೆಚ್. ಸೇವೆ ಒದಗಿಸಲು ಅವಕಾಶ ಕಲ್ಪಿಸಲಾಗುವುದು. ಪ್ರತಿ ಸಂಪರ್ಕಕ್ಕೆ 3,000 ರೂ.ಗಳ ಸಬ್ಸಿಡಿ ನೀಡಲಾಗುವುದು. ಮಾಸಿಕ ಇಂಟರ್‌ನೆಟ್ ಶುಲ್ಕದ ಅರ್ಧದಷ್ಟನ್ನು ಆಪರೇಟರ್‌ಗಳಿಗೆ ನೀಡಲಾಗುವುದು ಎಂದವರು ವಿವರಿಸಿದರು. ಹೆಚ್ಚಿನ ವಿವರಗಳಿಗೆ ಎಂ. ಗುರುಪ್ರಸಾದ್ : 94498 55560 ಹಾಗೂ ಹೆಚ್. ಪ್ರಶಾಂತ್ : 94834 62567 ಸಂಪರ್ಕಿಸಬಹುದು.

## ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ ಅಧಿಕಾರಿ, ಸಿಬ್ಬಂದಿ ಲೋಕಾ ಬಲೆಗೆ

ದಾವಣಗೆರೆ, ಫೆ.16- ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಆರ್. ಮಂಜುನಾಥ್ ಹಾಗೂ ನಗರ ಯೋಜನೆ ವಿಭಾಗದ ಭರತ್ ಲಂಚ ಸ್ವೀಕರಿಸುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ.





ಹರಿಹರ ತಾಲ್ಲೂಕಿನ ಶ್ರೀನಿವಾಸ್ ಎಂಬುವವರು ತಮ್ಮ ಜಮೀನಿನಲ್ಲಿ ಬಡಾವಣೆ ನಿರ್ಮಾಣ ಮಾಡಲು ಬಯಸಿದ್ದರು. ಅದಕ್ಕೆ ಸಂಬಂಧಿಸಿದಂತೆ ಪರವಾನಿಗೆ, ನಕ್ಷೆ ಮಾಡಿಕೊಡಲು ಮೂರು ಲಕ್ಷಕ್ಕೆ ಬೇಡಿಕೆ ಇಡಲಾಗಿತ್ತು. ಮೊದಲ ಕಂತಿನಲ್ಲಿ ಒಂದು ಲಕ್ಷ ಹಣ ನೀಡಲಾಗಿತ್ತು, ಇಂದು ಉಳಿದ ಎರಡು ಲಕ್ಷ ರೂ. ಹಣ ನೀಡುವಾಗ ಲೋಕಾಯುಕ್ತ ಅಧಿಕಾರಿಗಳು ಇಬ್ಬರನ್ನೂ ಟ್ರ್ಯಾಪ್ ಮಾಡಿ ಬಂಧಿಸಿದ್ದಾರೆ.

ಶ್ರೀನಿವಾಸ್ ದಾವಣಗೆರೆಯ ಶ್ರೀರಾಮ ಸೇನೆಯ ಕಾರ್ಯಕರ್ತರಾಗಿದ್ದು, ಅಧಿಕಾರಿಗಳ ಲಂಚಕ್ಕೆ ಬೇಸತ್ತು ದೂರು ನೀಡಿದ್ದರು. ಇವರ ದೂರನ್ನು ಪರಿಶೀಲಿಸಿ ಲೋಕಾಯುಕ್ತರು ಇಂದು ಬೆಳಗ್ಗೆ ದಾಳಿ ನಡೆಸಿದ್ದಾರೆ.

# ಎಸ್ಸೆಸ್ ಕೇರ್ ಟ್ರಸ್ಟ್ ನಿಂದ ನಮ್ಮ ನಡೆ ಆರೋಗ್ಯದೆಡೆಗೆ

## ಆರಂಭಿಕ ಹಂತದಲ್ಲೇ ಕ್ಯಾನ್ಸರ್ ರೋಗ ಪತ್ತೆ ಹಚ್ಚಿ ಮುಕ್ತಿಹೊಂದಲು ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ

ದಾವಣಗೆರೆ, ಫೆ. 16 - ಕ್ಯಾನ್ಸರ್ ನಂತಹ ಮಾರಕ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿದರೆ ಕ್ಯಾನ್ಸರ್ ರೋಗದಿಂದ ಮುಕ್ತಿ ಪಡೆಯಬಹುದಾಗಿದೆ ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ 2023ರ ವಿಶ್ವ ಕ್ಯಾನ್ಸರ್ ದಿನ ಹಾಗೂ ವಿಶ್ವ ಗ್ಲಾಕೋಮಾ ವಾರದ ಪ್ರಯುಕ್ತ ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಸ್ತನ ಕ್ಯಾನ್ಸರ್ ಮತ್ತು ಗರ್ಭಕೋಶ ಕ್ಯಾನ್ಸರ್ ಉಚಿತ ತಪಾಸಣೆ, ಸಲಹೆ ಹಾಗೂ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿದ ನಂತರ ಅವರು ಮಾತನಾಡಿದರು.

ಮಹಿಳೆಯರಲ್ಲಿ ಕ್ಯಾನ್ಸರ್ ನಲ್ಲಿ ಸ್ತನ ಕ್ಯಾನ್ಸರ್ ನಂ.1 ಆಗಿದ್ದು, ಸ್ತನ ಕ್ಯಾನ್ಸರ್ ಮನೆಯಲ್ಲಿಯೇ ಸ್ವಯಂ ಪರೀಕ್ಷಿಸಿಕೊಳ್ಳಲು ಸಹ ವೈದ್ಯರು ಶಿಬಿರದಲ್ಲಿ ಸಲಹೆ ನೀಡಲಿದ್ದು,



ರೋಗ ಲಕ್ಷಣಗಳನ್ನು ಪರಿಶೀಲಿಸಲು ಮತ್ತು ಹೆಚ್ಚಿನ ಮೌಲ್ಯಮಾಪನದ ಅವಶ್ಯಕತೆ 30 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಅಗತ್ಯವಿದ್ದು, ಸ್ಕ್ರೀನಿಂಗ್ ಮ್ಯಾಮೊಗ್ರಾಮ್ ಮೂಲಕ ಅನೇಕ ಗಡ್ಡೆಗಳನ್ನೂ ಪತ್ತೆ ಮಾಡಬಹುದು. ಉಚಿತ ತಪಾಸಣೆಯ ಉಪಯೋಗ ಪಡೆಯಲು ಮಹಿಳೆಯರು ಈ ಶಿಬಿರದ ಪ್ರಯೋಜನ ಪಡೆಯಬೇಕೆಂದು ತಿಳಿಸಿದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆಶಯದಂತೆ ಎಸ್.ಎಸ್.ಕೇರ್ ಟ್ರಸ್ಟ್, ಮಕ್ಕಳು ಮತ್ತು ಮಹಿಳೆಯರ ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಿ ರೋಗ ಬರುವ ಮುನ್ನವೇ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಈ ರೀತಿಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

2023ರ ವಿಶ್ವ ಕ್ಯಾನ್ಸರ್ ದಿನ ಹಾಗೂ ವಿಶ್ವ ಗ್ಲಾಕೋಮಾ ವಾರದ ಪ್ರಯುಕ್ತ ದಾವಣಗೆರೆ ನಗರಕ್ಕೆ ಹೊಂದಿಕೊಂಡಿರುವಂತೆ ಅರಸಾಪುರ, ಕಕ್ಕರಗೊಳ್ಳ, ಹದಡಿ, ದೊಡ್ಡಬಾತಿ, ಆಲೂರು, ಆಲೂರು ಹಟ್ಟಿ, ಶ್ಯಾಗಲೆ ಮತ್ತು ತೋಳಹುಣಸೆಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸ್ತನ ಕ್ಯಾನ್ಸರ್ ಮತ್ತು ಗರ್ಭಕೋಶ ಕ್ಯಾನ್ಸರ್, ದಂತ ಮತ್ತು ಕಣ್ಣುಗಳ ಉಚಿತ ತಪಾಸಣೆ, ಸಲಹೆ ಹಾಗೂ ಚಿಕಿತ್ಸೆ ಶಿಬಿರವನ್ನು ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನೇತ್ರ ತಜ್ಞರಾದ ಡಾ. ಶಾಂತಲಾ, ಸಮುದಾಯ ಆರೋಗ್ಯ ವಿಭಾಗದ ಕೋ ಆರ್ಡಿನೇಟರ್ ಹರೀಶ್, ಹದಡಿ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.

## ನಾಲ್ಕು ಕಂದಾಯ ವಿಭಾಗಗಳಲ್ಲಿ ಡಯಾಲಿಸಿಸ್ ಕೇಂದ್ರ

ಬೆಂಗಳೂರು, ಫೆ. 16 - ರಾಜ್ಯಾದ್ಯಂತ ನಾಲ್ಕು ಕಂದಾಯ ವಿಭಾಗಗಳಲ್ಲೂ ಡಯಾಲಿಸಿಸ್ ಕೇಂದ್ರಗಳನ್ನು ತಿಂಗಳಾಂತ್ಯಕ್ಕೆ ಆರಂಭಿಸಲಾಗುವುದೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಡಿ.ಎಸ್.ಸುರೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ತಿಂಗಳ 23ರಂದು ಟೆಂಡರ್‌ಗೆ ಕಡೇ ದಿನವಾಗಿದೆ. ತಿಂಗಳ ಅಂತ್ಯಕ್ಕೆ ಟೆಂಡರ್ ಪ್ರಕ್ರಿಯೆ ಮುಗಿಯಲಿದ್ದು ನಾಲ್ಕು ವಿಭಾಗಗಳಲ್ಲಿ ಡಯಾಲಿಸಿಸ್ ಯಂತ್ರಗಳು ಕಾರ್ಯಾರಂಭ ಮಾಡಲಿವೆ ಎಂದರು.

ಯಾವುದೇ ಸಮಸ್ಯೆ ಉಂಟಾದಾಗ ಡಯಾಲಿಸಿಸ್ ಯಂತ್ರಗಳನ್ನು ಸಮಯಕ್ಕೆ ಸರಿಯಾಗಿ ಸರಿಪಡಿಸಲು ಇಲ್ಲವೇ, ತಾಂತ್ರಿಕವಾಗಿ ಸಮಸ್ಯೆಗಳಿದ್ದರೆ, ಬದಲಾಯಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎಸ್ಕಾನ್ ಇ ಸಂಜೀವಿನಿ ಸಂಸ್ಥೆಯವರು ಇದನ್ನು ನಿರ್ವಹಣೆ ಮಾಡುತ್ತಿದ್ದಾರೆ. ರೋಗಿಗಳಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಸೋಮನಗೌಡ ಬಿ.ಪಾಟೀಲ್ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟು 263 ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಸಂಘ-ಸಂಸ್ಥೆಗಳು, ದಾನಿಗಳು ಉಚಿತವಾಗಿ ಆಂಬುಲೆನ್ಸ್ ನೀಡುತ್ತಾರೆ. ಆದರೆ, ಅವುಗಳ ನಿರ್ವಹಣೆ ತುಸು ಕಷ್ಟಕರವಾಗಿದೆ ಎಂದು ಮಾಹಿತಿ ನೀಡಿದರು.

## ಬಿ.ಬಿ.ಸಿ. ಕಚೇರಿಗಳ ಶೋಧ ಪೂರ್ಣ

ನವದೆಹಲಿ, ಫೆ. 16 – ಬಿ.ಬಿ.ಸಿ. ಕಚೇರಿಗಳಲ್ಲಿ ನಡೆಸಲಾದ ಶೋಧವನ್ನು ಆದಾಯ ತೆರಿಗೆ ಇಲಾಖೆ ಮುಕ್ತಾಯಗೊಳಿಸಿದೆ. ಒಟ್ಟು 58 ಗಂಟೆಗಳ ಕಾಲ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ಡಿಜಿಟಲ್ ಹಾಗೂ ಕಾಗದದ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ.

ದೆಹಲಿ ಹಾಗೂ ಮುಂಬೈನ ಬಿ.ಬಿ.ಸಿ. ಕಚೇರಿಗಳಲ್ಲಿ ಮಂಗಳವಾರದಿಂದ ಶೋಧ ಕಾರ್ಯ ಆರಂಭಿಸಲಾಗಿತ್ತು. ಈ ವೇಳೆ ಹಣಕಾಸು ವಹಿವಾಟಿನ ಕುರಿತು ವಿವರ ಕೇಳಲಾಗಿದೆ.

## ನಗರದಲ್ಲಿ ಇಂದು ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿಯು ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.

# ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ಭರಮಸಾಗರಕ್ಕೆ 'ಮೈಸೂರು ಪೇಟ'

**ಬಿ.ಜೆ. ಅನಂತ ಪದ್ಮನಾಭರಾವ್**

ಭರಮಸಾಗರ,ಫೆ.16- ಬಿಚ್ಚುಗತ್ತಿ ಭರಮಣ್ಣ ನಾಯಕರ ಆಡಳಿತಾವಧಿಯಲ್ಲಿ ಭರಮಣ್ಣ ನಾಯಕನು ಪಟ್ಟಕ್ಕೆ ಬಂದ ವರುಷದಲ್ಲಿ ಭರಮಸಾಗರಕ್ಕೆ ಜೋಡಿ ಕೆರೆಗಳನ್ನು ನಿರ್ಮಿಸಲು ಆದೇಶಿಸಲಾಯಿತು ಅದರಂತೆ ಶಾಲಿವಾಹನ ಶಕೆ 1240ರ ಪ್ರಭಾವ ನಾಮ ಸಂವತ್ಸರದಲ್ಲಿ ಕಾರ್ತಿಕ ಶುದ್ಧ ದಿವಸದಂದು ಭರಮಸಾಗರ ಕೆರೆಯ ಕಾಮಗಾರಿ ಪ್ರಾರಂಭವಾಗಿದ್ದನ್ನು ದಾಖಲೆಗಳು ಹೇಳುತ್ತದೆ. ಮತ್ತೀಗ ಕೆರೆಯ ಪರ್ವ ಆರಂಭವಾಗಿದೆ.

ಕಳೆದ 30 ವರ್ಷಗಳಿಂದ ಇಲ್ಲಿನ ಕೆರೆಗಳು ಒಣಗಿ ರೈತರು ಕಂಗಾಲಾಗಿರುವುದನ್ನು ತರಳಬಾಳು ಶ್ರೀಗಳು ಸೂಕ್ತವಾಗಿ ಪರಿಗಣಿಸಿ ಒಂದು ಉತ್ತಮ ನಿರ್ಧಾರವನ್ನು ಮಾಡಿ, ಈ ಭಾಗದ ಕೆರೆಗಳಿಗೆ ನೀರು ತುಂಬಿಸುವ ಪ್ರಯತ್ನ ಮಾಡಿದ್ದಾರೆ. 'ಭಗೀರಥ ಪ್ರಯತ್ನ' ಮಾಡಿ ಈ ಭಾಗದ 23 ಕೆರೆಗಳಿಗೆ ನೀರು ತರುವ ಯೋಜನೆಯನ್ನು ಆಗಿನ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರಿಂದ ಯೋಜನೆಗೆ ಅಂದಾಜು 565 ಕೋಟಿ ಹಣವನ್ನು ಒಂದೇ ಸಾರಿ ಬಿಡುಗಡೆ ಮಾಡಿಸಿದ್ದಾರೆ. ಈ ಕೆಲಸವು ಪ್ರಾರಂಭವಾಗಿ ಭರಮಸಾಗರದ ಕೆರೆಗಳಿಗೆ ನೀರು ಹರಿದು ಬಂದು ಒಂದು ವರ್ಷವಾಯಿತು.

ನೀರು ಬಂದ ಮೇಲೆ ಎಲ್ಲಾ ಕೆರೆ ಕಟ್ಟೆ ಚೆಕ್ ಡ್ಯಾಮ್‌ಗಳು ತುಂಬಿರುತ್ತವೆ ಇನ್ನು ಕೆಲವು ಭಾಗಕ್ಕೆ ನೀರು ಬರಬೇಕು ನೀರು ಬಂದ ನಂತರ ಕೆರೆ ಏರಿಯೂ ಸಹ ಬಿರುಕು ಬಿಟ್ಟು ಜನರು ಬಹಳ ಹೆದರಿದ್ದರು. ಕೂಡಲೇ ಶ್ರೀಗಳವರು ಕೆರೆ ಏರಿಯು ಬಿರುಕು ಬಿಟ್ಟಿರುವುದನ್ನು ವೀಕ್ಷಿಸಿ ಕೂಡಲೇ ನೀರಾವರಿ ಇಲಾಖೆ ಹಾಗು ಸ್ಥಳೀಯ ಶಾಸಕ ಎಂ. ಚಂದ್ರಪ್ಪನವರಿಗೆ ಸರಿಪಡಿಸಲು ಸೂಕ್ತ ಸಲಹೆ ನೀಡಿದರು.

ರೈತರು ತಮ್ಮ ತಮ್ಮ ಜಮೀನಿನಲ್ಲಿ ಅಡಿಕೆ ತೋಟ ಮಾಡಬೇಕು. ಈ ಮೆಕ್ಕೆಜೋಳದಿಂದ ನಾವು ಉದ್ಧಾರವಾಗುವುದಿಲ್ಲವೆಂದು ತೋಟದ ಅಭಿವೃದ್ದಿ ಕೆಲಸಕ್ಕೆ ಕೈ ಹಾಕಿರುತ್ತಾರೆ. ಈ ಹಿಂದೆ ಸುಮಾರು ಸಾವಿರ ಅಡಿ ಬೋರು ಕೊರೆದರೂ ನೀರು ಬರುತ್ತಿರಲಿಲ್ಲ. ಈಗ ಕೇವಲ 100 ರಿಂದ 200 ಅಡಿ ಬೋರ್ ಕೊರೆಸಿದರೆ ಸಾಕು ನೀರು ಬರುತ್ತದೆ. ಈ ಭಾಗದ ರೈತರು ಅಡಿಕೆ ಸಸಿ ನಾಟಿ ಮಾಡಲು ತುಂಬಾ ಶ್ರಮ ಹಾಕಿ, ಇರುವ ಜಮೀನಿಗೆ ತೋಟವನ್ನು ಮಾಡುತ್ತಿದ್ದಾರೆ. ತಮಗೆ ಬೇಕಾಗುವ ಸಸಿಯನ್ನು ಅವರೇ ತಮ್ಮ ಮನೆಯ ಮುಂಭಾಗದಲ್ಲಿ ಬೆಳೆಸುತ್ತಿದ್ದಾರೆ. ಉಳಿದ ಸಸಿಗಳನ್ನು 35 ರಿಂದ 40 ರೂಪಾಯಿ ತನಕ ಮಾರಾಟ ಮಾಡುತ್ತಿದ್ದಾರೆ. ಕೆಲವರು ಸಸಿ ಬೆಳೆಸಿ ಮಾರಾಟ ಮಾಡುವುದೇ



ಒಂದು ದುಡಿಮೆ ಮಾಡಿಕೊಂಡಿರುತ್ತಾರೆ.

ಆದರೆ ಈ ಹಿಂದೆ ಹಳೆಯ ಅಡಿಕೆ ತೋಟವನ್ನು ಉಳಿಸಿಕೊಳ್ಳಲು ಸಾಲ ಮಾಡಿಕೊಂಡರು, ಕೆಲವು ಜನರು ಅಡಿಕೆ ಮರವನ್ನೇ ಕಡಿದು ಹಾಕಿರುತ್ತಾರೆ ಕೆಲವು ರೈತರು ಬ್ಯಾಂಕ್‌ಗಳಲ್ಲಿ ಮಾಡಿದ ಸಾಲ ತೀರದೆ ಜಮೀನು ಮಾರಿದರು. ಮತ್ತೆ ಕೆಲವರು ಸಾಲಕ್ಕೆ ಹೆದರಿ ಜೀವವನ್ನೇ ಕಳೆದುಕೊಂಡಿದ್ದಾರೆ.

ಭರಮಸಾಗರದಿಂದ ನಾಲ್ಕೈದು ಕಿಲೋ ಮೀಟರ್ ದೂರದಲ್ಲಿ ಒಂದು ಎಕರೆ ಜಮೀನು 25 ರಿಂದ 30 ಲಕ್ಷ ಬೆಲೆಗೆ ಮಾರಾಟವಾಗುತ್ತಿದೆ. ಈ ಭಾಗಕ್ಕೆ ನೀರು ಬಂದ ನಂತರ ಅಂತರ್ಜಲ ಅಭಿವೃದ್ಧಿಯಾಗಿ ರೈತರಿಗೆ ಅನುಕೂಲವಾಗಿದೆ. ರೈತರು ತಮ್ಮ ಜಮೀನಿಗೆ ಒಂದು ಎಕರೆಗೆ 600 ರಿಂದ 650 ಸಸಿ ನಾಟಿ ಮಾಡಲಾಗುತ್ತದೆ. ಅಲ್ಲದೆ ನೀರು ಎಲ್ಲಾ ಸೌಲಭ್ಯವನ್ನು ಮಾಡಲು ಅಂದಾಜು 3,00,000 ತನಕ ಎಕರೆಗೆ ಖರ್ಚಾಗುತ್ತಿದೆ ಎಂದು ರೈತರು ಹೇಳುತ್ತಾರೆ.

ಇನ್ನು ಕೇವಲ ಆರೇಳು ವರ್ಷಗಳಲ್ಲಿ ಭರಮಸಾಗರ ಹಾಗೂ ಹೋಬಳಿಯ ಮಟ್ಟದಲ್ಲಿ ಅಡಿಕೆ ತೋಟಗಳು ಚೆನ್ನಾಗಿ ಬೆಳೆದಿವೆ. ಈ ರೀತಿ ಬರೀ ಅಡಿಕೆ ಮಾಡುವುದರಿಂದ ಮುಂದೆ ಊಟಕ್ಕೆ ರಾಗಿ, ಜೋಳ, ಸಿರಿಧಾನ್ಯವನ್ನು ಯಾರು ಬೆಳೆಯಬೇಕೆಂದು ಕೆಲವು ರೈತರು ಮಾತನಾಡುತ್ತಿದ್ದಾರೆ. ಈ ಹಿಂದೆ ಭರಮಸಾಗರದ ಹಲಸಿನ ಹಣ್ಣು ತುಂಬಾ ಹೆಸರುವಾಸಿ ಆಗಿತ್ತು ಅಲ್ಲದೆ ಮೈಸೂರು ಮಹಾರಾಜರೂ ಸಹ ಹಣ್ಣಿನ ರುಚಿ ಸವಿದು ಮೆಚ್ಚುಗೆ ಪಟ್ಟಿದ್ದರು. ಈಗ ಆ ರುಚಿಯ ಹಲಸಿನ ಮರಗಳು ಇಲ್ಲದಂತಾಗಿದೆ.

ಮೊನ್ನೆ ಕೊಟ್ಟೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಭರಮಸಾಗರ ಹಾಗೂ ಅಕ್ಕಪಕ್ಕದ ಗ್ರಾಮದ ಭಕ್ತರ ಭಕ್ತಿಯನ್ನು ಗಮನಿಸಿ ಭಕ್ತರ ಮನವಿಯನ್ನು ಮನ್ನಿಸಿ ಮುಂದಿನ ವರ್ಷ ತರಳಬಾಳು ಹುಣ್ಣಿಮೆಯನ್ನು ಭರಮಸಾಗರದಲ್ಲಿ ಮಾಡಲು ಭಕ್ತ ಸಮೂಹಕ್ಕೆ ತಿಳಿಸಿ, ಭರಮಸಾಗರಕ್ಕೆ ಮೈಸೂರು ಜರತಾರಿ ಪೇಟವನ್ನು ಇಟ್ಟು ಶ್ರೀಗಳವರು ಆಶೀರ್ವಾದ ಮಾಡಿದರು.

ಬರುವ ವರ್ಷ ನಮ್ಮ ಊರಿನಲ್ಲಿ ತರಳಬಾಳು ಹುಣ್ಣಿಮೆ ಕಾರ್ಯಕ್ರಮವನ್ನು ತುಂಬಾ ವಿಜೃಂಭಣೆಯಿಂದ ಮಾಡಬೇಕೆಂದು ಸ್ಥಳೀಯ ಶಾಸಕರು, ಗ್ರಾಮದ ಮುಖಂಡರುಗಳು, ಹಿರಿಯ ಮಹಿಳೆಯರು, ಭಕ್ತರು, ಪತ್ರಕರ್ತರು ಇನ್ನು ಕೆಲವರು ಈಗಿನಿಂದಲೇ ಯೋಚಿಸತೊಡಗಿದ್ದಾರೆ.

ಶ್ರೀಗಳವರ ಆಶೀರ್ವಾದದಿಂದ ಮುಂದಿನ ವರ್ಷ 2024ರಲ್ಲಿ ತರಳಬಾಳು ಹುಣ್ಣಿಮೆ ಭರಮಸಾಗರದಲ್ಲಿ ನಡೆದ ನಂತರ ಎಲ್ಲಾ ಅಭಿವೃದ್ಧಿ ಪಥದಲ್ಲಿ ಸಾಗಿ ಭರಮಸಾಗರದ ಚಿತ್ರಣವೇ ಬದಲಾಗುವುದರಲ್ಲಿ ಅನುಮಾನವೇ ಇಲ್ಲ. ಶ್ರೀಗಳ ನಿರಂತರ ಆಶೀರ್ವಾದದಿಂದ ಭರಮಸಾಗರ ತಾಲ್ಲೂಕು ರಚನೆಯಾಗಬೇಕು ಎಂಬುದು ಈ ಭಾಗದ ಜನತೆಯ ಆಸೆಯಾಗಿದೆ.

# ಶೀಘ್ರದಲ್ಲೇ ಪದವಿ ಪ್ರಾಧ್ಯಾಪಕರ ನೇಮಕ

ಬೆಂಗಳೂರು, ಫೆ. 16 - ಸರ್ಕಾರಿ ಪದವಿ ಕಾಲೇಜಿಗಳಲ್ಲಿ ಖಾಲಿ ಇರುವ 1,050 ಸಹಾಯಕ ಪ್ರಾಧ್ಯಾಪಕರನ್ನು ಶೀಘ್ರದಲ್ಲೇ ನೇಮಕ ಮಾಡಲಾಗುವುದೆಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಡಾ.ಅವಿನಾಶ್ ಉಮೇಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟು 6500 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 5000 ಹುದ್ದೆಗಳು ಭರ್ತಿಯಾಗಿವೆ. ಹೊಸದಾಗಿ 1050 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಲಿಖಿತ ಪರೀಕ್ಷೆ ನಡೆಸಲಾಗಿದೆ ಎಂದರು.



ಬಾಕಿ ಉಳಿದಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು. ಯಾವ ಕಾಲದಲ್ಲಿ ಬೋಧಕರ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಭರ್ತಿ ಮಾಡುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹುದ್ದೆಗಳನ್ನು ಭರ್ತಿ ಮಾಡಲು ನಮಗೆ ಹೆಚ್ಚುವರಿಯಾಗಿ 8000 ಹುದ್ದೆಗಳು ಬೇಕಾಗುತ್ತವೆ. ಅತಿಥಿ ಉಪನ್ಯಾಸಕರ ಮೂಲಕವೂ ಕೊರತೆ ಇರುವ ಕಡೆ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಂಡಿದ್ದೇವೆ ಎಂದು ವಿವರಿಸಿದರು.

ಈ ವೇಳೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆಯೋ ಅಂತಹ ಕಡೆ ಭರ್ತಿ ಮಾಡಬೇಕು. ಕೆಲವು ಕಾಲೇಜುಗಳಲ್ಲಿ 80-90ರಷ್ಟು ವಿದ್ಯಾರ್ಥಿಗಳಿಗೆ ಒಬ್ಬರೇ ಪ್ರಾಧ್ಯಾಪಕರಿದ್ದಾರೆ. ಇಂತಹ ಕಡೆ ಗಮನ ನೀಡಬೇಕು ಎಂದು ಸಚಿವರಿಗೆ ಸಲಹೆ ಮಾಡಿದರು.


## ಮಲೇಬೆನ್ನೂರಿನಲ್ಲಿ ಸಂತ ಸೇವಾಲಾಲ್ ಜಯಂತಿ



ಮಲೇಬೆನ್ನೂರು, ಫೆ. 15- ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿಯಲ್ಲಿ ಸಂತ ಸೇವಾಲಾಲ್ ಮಹಾರಾಜ್ ಅವರ 284ನೇ ಜಯಂತಿಯನ್ನು ಬುಧವಾರ ಸಂಭ್ರಮದಿಂದ ಆಚರಿಸಲಾಯಿತು.

ಉಪ ತಹಶೀಲ್ದಾರ್ ಆರ್. ರವಿ, ಪುರ ಸಭೆ ಮುಖ್ಯಾಧಿಕಾರಿ ಎ. ಸುರೇಶ್, ಪುರಸಭೆ ಸದಸ್ಯರಾದ ಭೋವಿ ಸುರೇಶ್, ಷಾ ಅಬ್ರಾರ್, ಸಾಬೀರ್ ಅಲಿ, ಭೋವಿಕುಮಾರ್, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಇಂಜಿನಿಯರ್ ಹಾಲೇಶಪ್ಪ, ಇಮ್ರಾನ್, ನಾಡ ಕಛೇರಿಯ ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಸಿಬ್ಬಂದಿಗಳಾದ ಪುಷ್ಪಾ ಹಿರೇಮಠ್, ಮಾರುತಿ, ಬಸವರಾಜ್, ಜೈ ಮಾರುತಿ, ಆನಂದ್, ಶಿಲ್ಪಾ, ಬಂಜಾರ್ ಸಮಾಜದ ಅಧ್ಯಕ್ಷ ಕೊಮಾರನಹಳ್ಳಿ ಪರಮೇಶ್ವರನಾಯ್ಕ, ಹಾಲಿವಾಣದ ಕುಡಪಲಿ ತಿಪ್ಪೇಶ್ ಮತ್ತಿತರರು ಭಾಗವಹಿಸಿದ್ದರು.

## ಮಾವಿನಹೊಳೆಯಲ್ಲಿ ನಾಳೆ ಶ್ರೀಗುರು ಮಹಾರುದ್ರಸ್ವಾಮಿ ಮಹಾಶಿವರಾತ್ರಿ



ಚನ್ನಗಿರಿ, ಫೆ.16- ತಾಲ್ಲೂಕಿನ ಮಾವಿನಹೊಳೆ ಶ್ರೀ ಗುರು ಮಹಾರುದ್ರ ಸ್ವಾಮಿಯ ಮಹಾಶಿವರಾತ್ರಿ ಮಹೋತ್ಸವವು ಶ್ರೀ ರೇಣುಕಾ ಶಿವಾಚಾರ್ಯ ಮಹಾಸ್ವಾಮೀಜಿ (ಯಡಿಯೂರು ಕ್ಷೇತ್ರ ಹಾಗೂ ಚನ್ನಗಿರಿ ತಾಲ್ಲೂಕು ತಾವರಕೆರೆ ಶಿಲಾ ಮಠ) ದಿವ್ಯ ಸಾನ್ನಿಧ್ಯದಲ್ಲಿ ನಾಳೆಯಿಂದ 3 ದಿವಸ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 18ರ ಶನಿವಾರ ರಾತ್ರಿ 8 ಗಂಟೆಗೆ ಜಾಗರಣೆ ನಂತರ 10.30ಕ್ಕೆ ಶ್ರೀ ಗುರು ಮಹಾರುದ್ರ ಸ್ವಾಮಿಯ ಅಡ್ಡ ಪಲ್ಲಕ್ಕಿ ಉತ್ಸವವನ್ನು ವೀರಗಾಸೆ, ನೃತ್ಯ, ಭಜನೆ, ಮಂಗಳವಾದ್ಯ ಗಳೊಡನೆ ಶ್ರೀಮಠಕ್ಕೆ ಆಗಮಿಸುವುದು.ನಂತರ ಬೆಳಗಿನ ಜಾವ 4ಕ್ಕೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಮಹಾರುದ್ರಾಭಿಷೇಕ, ಅಷ್ಟೋತ್ತರ, ದೀಪೋತ್ಸವ, ಸಹಸ್ರ ಬಿಲ್ವಾರ್ಚನೆ, ಪಾದಪೂಜೆ, ಪ್ರಸಾದ ವಿನಿಯೋಗ ನಡೆಯುವವು.

ದಿನಾಂಕ 19ನೇ ಭಾನುವಾರ ಬೆಳಿಗ್ಗೆ 8ಕ್ಕೆ ಶ್ರೀ ಗುರು ಮಹಾರುದ್ರ ಸ್ವಾಮಿಯ ಮಹಾಪೂಜೆ ಜರುಗುವುದು.

## ಶಿವರಾತ್ರಿಗೆ ಶಿವನ ಹಾಡು

ಶಂಕರ ನೀನೇ ಕರುಣಿಸಿ ಕಾಯೋ
ಕಿಂಕರ ನಾನೆಂದೂ ಕಡೆ ಗಾಣಿಸದಿರು
ಶಂಕೆ ಇಲ್ಲದೇ ನಿನ್ನ ಭಜಿಸು ವೆ
ಆಕಳಂಕ ಚರಿತನೆ ಕಾಪಾಡು

ನಾರದ ತುಂಬುರು ಗಾನದಿ ಕರೆವರು
ಪೊರೆಯಲು ಸರ್ವರ ಬೇಗನೆ ಬಾ
ಹರ ಹರ ಎಂದು ಗಣಗಳು ಸ್ತುತಿಸಲು
ಪರಿ ಪರಿ ವರಗಳ ನೀಡಲು ಬಾ

ನಂದಿಯು ಮದ್ದಳೆ ಬಾರಿಸಿ ಕರೆವನು
ಬದಿಯಲಿ ತ್ರಿಶೂಲ ಹಿಡಿದವ ಬಾ
ಹುದುಗಿದ ಕಷ್ಟಗಳ ಕಳೆಯಲು ನೀ
ನಿಂದು ಮನದಿ ಪೊರೆಯಲು ಬಾ

ಗಾನವ ಮಾಡಲೂ ನಾ ಶಕ್ತನಲ್ಲ
ನೃತ್ಯ ಸೇವೆಯು ನಾ ಮಾಡಲಾರೆ
ಭಕ್ತಿಯೊಂದೆ ನನ್ನಲಿ ಇರುವುದು
ಕರುಣಾ ಕರನೆ ಬೇಗನೇ ಬಾ

**- ಕೋಮಲ ವಸಂತ್ ಕುಮಾರ್**

# ಆಧುನಿಕ ಜಗತ್ತಿನಲ್ಲಿ ಕಂಪ್ಯೂಟರ್ ಜ್ಞಾನವು ಪ್ರತಿಯೊಬ್ಬರಿಗೂ ಅತ್ಯಗತ್ಯ

**ಹರ್ಷಿತಾ ಕಂಪ್ಯೂಟರ್ಸ್ ಕಾರ್ಯಕ್ರಮದಲ್ಲಿ ಪತ್ರಕರ್ತ ನಾಗರಾಜ ಬಡದಾಳ್**

ದಾವಣಗೆರೆ, ಫೆ. 16- ಆಧುನಿಕ ಜಗತ್ತಿನಲ್ಲಿ ಕಂಪ್ಯೂಟರ್ ಜ್ಞಾನವು ಪ್ರತಿಯೊಬ್ಬರಿಗೂ ಅತ್ಯಗತ್ಯ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು, ಕಂಪ್ಯೂಟರ್ ತರಬೇತಿ ಹೊಂದಿದವರು ತಮ್ಮ ಭವಿಷ್ಯ ರೂಪಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸಬೇಕು ಎಂದು ಹಿರಿಯ ಪತ್ರಕರ್ತ ನಾಗರಾಜ ಎಸ್. ಬಡದಾಳ್ ಕಿವಿಮಾತು ಹೇಳಿದರು.

ನಗರದ ಅಕಾಡೆಮಿಕ್ ಆಫ್ ಅಕೌಂಟ್ಸ್ ಅಂಡ್ ಟ್ಯಾಕ್ಸೇಷನ್‌ನಲ್ಲಿ ಕಂಪ್ಯೂಟರ್ ತರಬೇತಿ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.



ಅಕ್ಷರ ಬಲ್ಲವನಷ್ಟೇ ಅನಕ್ಷರಸ್ಥ ಅಲ್ಲ, ಕಂಪ್ಯೂಟರ್ ಬಳಕೆ ಬಗ್ಗೆ ಅರಿವಿಲ್ಲದವನೂ ಅನಕ್ಷರಸ್ಥ ಎಂಬುದಾಗಿ ನೋಡುವ ಕಾಲ ಇದಾಗಿದೆ ಎಂದರು. ಸಾಕಷ್ಟು ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳು, ಯುವಕ-ಯುವತಿಯರು ಜೀವನದ ಗುರಿ ಸಾಧಿಸುವ ಪ್ರಯತ್ನ ಮಾಡಿದರೂ, ಗುರಿಯತ್ತ ನೆಟ್ಟ ಮನಸ್ಸು ವಿಚಲಿತವಾಗಬಾರದು. ನಿಮ್ಮ ಹೆತ್ತವರು, ಕುಟುಂಬಸ್ಥರು ನಿಮ್ಮ ಮೇಲೆ ಸಾಕಷ್ಟು ನಂಬಿಕೆ, ವಿಶ್ವಾಸ ಹೊಂದಿರುತ್ತಾರೆ. ಅದ್ಯಾವುದೂ ಹುಸಿಯಾಗದಂತೆ ಜೀವನ ರೂಪಿಸಿಕೊಂಡು, ಸಾಧನೆ ಮಾಡಬೇಕು ಎಂದು ತಿಳಿಸಿದರು.

ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ ಭಟ್ ಮಾತನಾಡಿ, ಜೀವನ ಸಾಕಷ್ಟು ಅವಕಾಶಗಳನ್ನು ನೀಡುತ್ತದೆ. ಬಂದ ಅವಕಾಶಗಳನ್ನು ಸದ್ಬಳಕೆ ಮಾಡಿ, ಜೀವನ ಕಟ್ಟಿಕೊಳ್ಳಬೇಕು. ಯಾವುದೇ ಕಾರಣಕ್ಕೂ ನಿಮ್ಮ ಗುರಿ ಕಡೆಯಿಂದ ಗಮನ ಬೇರೆಡೆ ಹರಿಸಬೇಡಿ. ಗುರು, ಹಿರಿಯರ ಬಗ್ಗೆ ಅಭಿಮಾನ, ಗೌರವ ಸದಾ ಇರಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಡ್ಲೆಬಾಳು ಗ್ರಾಮದ ಹರ್ಷಿತಾ ಕಂಪ್ಯೂಟರ್ಸ್ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಲೆಕ್ಕ ಪರಿಶೋಧಕ ಜಿ. ಮಹಾಂತೇಶ್ ಮಾತನಾಡಿದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಶ್ರೀಕಾಂತ ಬಗರೆ, ಮಿರಜ್‌ಕರ್ ಟ್ಯುಟೋರಿಯಲ್ಸ್‌ ಮುಖ್ಯಸ್ಥ ಮಲ್ಲಿಕಾರ್ಜುನ ಮಿರಜ್‌ಕರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

## ಟೆಲಿಮಾರ್ಕೆಟಿಂಗ್ ವಿರುದ್ಧ ಟ್ರಾಯ್ ಚಾಟಿ

ನವದೆಹಲಿ, ಫೆ. 16 – ಟೆಲಿಮಾರ್ಕೆಟ್ ಕಂಪನಿಗಳು ಅನಧಿಕೃತವಾಗಿ ಕಳಿಸುವ ಮೆಸೇಜ್‌ಗಳ ವಿರುದ್ಧ ಚಾಟಿ ಬೀಸಿರುವ ಟೆಲಿಕಾಂ ನಿಯಂತ್ರಕ ಟ್ರಾಯ್, ಟೆಲಿಮಾರ್ಕೆಟ್‌ ಕಂಪನಿಗಳು ಅಕ್ರಮವಾಗಿ ಕಾರ್ಯನಿರ್ವಹಿಸುವುದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಟೆಲಿಕಾಂ ಆಪರೇಟರ್‌ಗಳಿಗೆ ನಿರ್ದೇಶನ ನೀಡಿದೆ. ಕಿರಿಕಿರಿಯ ಮೆಸೇಜ್‌ಗಳನ್ನು ಹತ್ತಿಕ್ಕಬೇಕು. ಈ ಬಗ್ಗೆ 60 ದಿನಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಟ್ರಾಯ್ ಹೇಳಿದೆ.


**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಪೂಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಿಬೇಕಾದ ಮೊಬೈಲ್ ನಂ.
81056 01900, 63627 53030

**ಮನೆಗಳು ಮಾರಾಟಕ್ಕಿವೆ**
ನಿಟುವಳ್ಳಿ ( ಇಂಚರ ಸ್ಕೂಲ್ ಹತ್ತಿರ ) ಉತ್ತರ 22x85, (ಮೂರು ಫ್ಲೋರ್ ) ಜೆ.ಹೆಚ್. ಪಟೇಲ್ ಬಡಾವಣೆ 30x50, (2 BHK ಮೇಲೆ ಸಿಂಗಲ್ ಅಟ್ಯಾಚ್ ರೂಮ್) S.S 'A' ಬ್ಲಾಕ್ ಪಶ್ಚಿಮ 30x40, ಬಸವೇಶ್ವರ ಬಡಾವಣೆ ಪೂರ್ವ 30x40.
ಐಗೂರು ವಿಜಯಕುಮಾರ
99457 02495

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರಿನ ಪಾರ್ಕ್ ಪಕ್ಕದಲ್ಲಿ 20x30 ಅಳತೆಯಲ್ಲಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98442 94446

**ಸೈಟ್ ಮಾರಾಟಕ್ಕೆ**
S S HOSPITAL ಹಿಂಭಾಗ 30X40 ಉತ್ತರ 30X50 ಉತ್ತರ 30X50 ಕಾರ್ನರ್ 60X40 ಪಶ್ಚಿಮ. ಉತ್ತರ ಕಾರ್ನರ್
ಕಿರಣ್ ಬೂಸ್ನೂರ್ (ಏಜೆಂಟ್)
98440-63409

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60, 40x60 South ಅಕ್ಕ-ಪಕ್ಕ 120 ಅಡಿ ರೋಡ್‌ಗಿದೆ. 30x40, 30x40 South ಅಕ್ಕ-ಪಕ್ಕ. 30x50 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu & Khatha Change**
Building Licence
Call :
96118-66449

**ಬೇಕಾಗಿದ್ದಾರೆ**
ಎಂಸಿಸಿ 'ಎ' ಬ್ಲಾಕ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
99729 11344

**ಮನೆ ಲೀಸ್‌ಗೆ ಇದೆ**
2BHK 1ನೇ ಮಹಡಿ
1 BHK 1ನೇ ಮಹಡಿ ಮನೆ ಲೀಸ್‌ಗೆ
1 BHK 2ನೇ ಮಹಡಿ ಮನೆ ಬಾಡಿಗೆಗೆ ಇದೆ.
#239/7-62. ಶಾಮನೂರು, ಡಾಲರ್ಸ್ ಕಾಲೋನಿ, ದಾವಣಗೆರೆ.
91108 95861, 86607 04578

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯ ತಯಾರಿಕಾ ವಿಭಾಗದಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ - ಎಸ್.ಎಸ್.ಎಲ್.ಸಿ ವಯಸ್ಸು : 25 ರಿಂದ 40 ರ ಒಳಗೆ. ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734

**ಸೈಟ್ ಮನೆ ಖರೀದಿಗೆ ಬೇಕಾಗಿದೆ**
ಹೊಸಪೇಟೆ ಮತ್ತು ನೆಲಮಂಗಲದಲ್ಲಿ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಶರಭೇಶ್ವರ ಊಟದ ಹೋಟೆಲ್ ನಲ್ಲಿ ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಮತ್ತು ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.ಆಕರ್ಷಕ ಸಂಬಳ, ಊಟ, ವಸತಿ ಸೌಲಭ್ಯ ನೀಡಲಾಗುವುದು.
ಸಂಪರ್ಕಿಸಿ: ಬಸವರಾಜಯ್ಯ ಹಿರೇಮಠ
94489 80070, 88847 04025

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
98445 67456

**ಹೊಸ ಮನೆ ಮಾರಾಟಕ್ಕಿದೆ**
30x40 ರಲ್ಲಿ 6 ಪೋರ್ಷನ್ ಇರುವ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
ಸ್ಥಳ : ಆನಗೋಡು ಪೆಟ್ರೋಲ್ ಬಂಕ್ ಹಿಂಭಾಗ
89705 67143
89711 92936

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕುಕ್ ಕಮ್ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ :15000/- ಊಟ, ರೂಂ ಉಚಿತ. 12 ಗಂಟೆ ಕೆಲಸ. ಸಂಪರ್ಕಿಸಿ.
97400 98004, 97400 98047

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ. ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾತ್ರಿ ಪಾಳ್ಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾಜ್ಞಾನವುಳ್ಳ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ.
08192 254736

**ಸೈಟುಗಳು ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 40x40 (40 ಸಿಮೆಂಟ್ ರಸ್ತೆ) 30x44, 30x54, ಪಶ್ಚಿಮ 30x50 (ಅಕ್ಕ-ಪಕ್ಕ 40 ಅಡಿ ಸಿಮೆಂಟ್ ರಸ್ತೆ) 40x30 ಆಂಜನೇಯ ಬಡಾವಣೆ ಉತ್ತರ 30x50.
ಐಗೂರು ವಿಜಯಕುಮಾರ
99457 02495

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ)
87490 98879

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನದ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ. 60x40 East, Rate : 1950/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹತ್ತಿರ, ವಿವೇಕಾನಂದ ಬಡಾವಣೆಯಲ್ಲಿ 30x60 West, 30x50 East, 30x43 East, 30x40 West, 30x50 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಅಲರ್ಟ್ ಸೆಕ್ಯೂರಿಟಿ ಡಿಟೆಕ್ಟಿವ್ ಫೋರ್ಸ್ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮ ವೇತನ ಹಾಗೂ ಇಎಸ್‌ಐ ಮತ್ತು ಪಿ.ಎಫ್ ಸೌಲಭ್ಯ ಇರುತ್ತದೆ.
ವಿಳಾಸ : ಶಿವಪ್ಪ ಸರ್ಕಲ್ , 8ನೇ ಕ್ರಾಸ್, ನಿಟ್ಟುವಳ್ಳಿ ಮೇನ್ ರೋಡ್, ದಾವಣಗೆರೆ.
70012 87756, 95351 56531, 97409 77785

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷ ವಯಸ್ಸಿನ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**WANTED**
Banking Sector tele caller (Female Only)
Qualification : Any Degree.
No. 2257/5 2nd Floor, MCC `A' Block Beside Togataveera Kalyana Mantapa
81237 63199
Interview time : 11AM

**WANTED**
Civil Engineers Only for Ladies
Contact :
Ph. : 80880 50729
74060 21863

**ಹೋಟೆಲ್ ಫುಡೀಸ್**
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪ ಹತ್ತಿರ,
ಬೇಕಾಗಿದ್ದಾರೆ
ವೆಯ್ಟರ್, ಲೇಡಿ ಕ್ಲೀನರ್
98861 56688

**2 BHK ಮನೆ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ)**
ಮೊದಲ ಮಹಡಿ ಇಟಾಲಿಯನ್ ಕಿಚನ್ ಮತ್ತು ವೆಸ್ಟರ್ನ್ & ಇಂಡಿಯನ್ ಬಾತ್ ರೂಂ ಇರುವ ಸುಸಜ್ಜಿತವಾದ ಮನೆ ಬಾಡಿಗೆಗೆ ಇದೆ. I ಮೇನ್, 4ನೇ ಕ್ರಾಸ್, ಕೆ.ಬಿ. ಬಡಾವಣೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ.
98455 40058

**ಗೋಡೌನ್ ಬಾಡಿಗೆಗೆ ಇದೆ**
35x26 ದೊಗ್ಗಳ್ಳಿ ಕಾಂಪೌಂಡ್, ಕೆ.ಆರ್. ರೋಡ್, ದಾವಣಗೆರೆ.
94487 54140
98452 55995

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ಜರೇಕಟ್ಟೆ
ಫೋ.: 89049 07242

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕೆ ಇವೆ**
ಮಹಾಲಕ್ಷ್ಮಿ 40x30 ಪೂರ್ವ, ಕುಂದವಾಡ ಕೆರೆ ಪಕ್ಕದಲ್ಲಿ 30x45 ಪಶ್ಚಿಮ, ನಿಜಲಿಂಗಪ್ಪ ಬಡಾವಣೆ 40x60 ದಕ್ಷಿಣ, ಬಸವೇಶ್ವರ 50x60 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್. ಎಸ್
97418 11694

**Single Room For Rent**
J.H. Patel Badavane, Near Podar International School
95358 41058
88617 11072

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟಿನ ಮೂಲ ಪತ್ರ ಕಳೆದಿದೆ**
ಪ್ರವೀಣ್ ಕುಮಾರ್ ಮತ್ತು ಹಿತೇಶ್‌ಕುಮಾರ್ ಹೆಸರಿನಲ್ಲಿರುವ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ, ಯರಗುಂಟೆ ವಿಭಾಗದಲ್ಲಿ ಸೇರ್ಪಡೆಯಾಗಿರುವ ಸರ್ವೇ ನಂ. 21/2ಎ/12 ರಲ್ಲಿ ಬರತಕ್ಕ ಸೈಟ್ ನಂ. 365/64 ರಿ.ನಂ. ಡಿವಿಜಿ-1-10349/2010-11 ಮತ್ತು ಸೈಟ್ ನಂ. 365/65 ರಿ.ನಂ. ಡಿವಿಜಿ-1-10350/2010-11ರ ಮೂಲ ಪತ್ರವು ಮನೆ ಸ್ವಚ್ಛ ಮಾಡುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 94495 78904

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**JOB OPPORTUNITY**
MANAGEMENT / WORKING EMPLOYEE (0-3 YEARS EXPERIENCE) IN PHARMACEUTICAL BUSINESS or FMCG
SKILLS REQUIRED : Good Communication, Understanding English, Basic computer operating, Riding 2 wheeler must.
SALES MAN (3-5 YEARS EXPERIENCE) IN PHARMACEUTICAL FIELD
SKILLS REQUIRED : Good communication, Customer relationship management.
CONTACT : 74066 59695

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್. 2) ಮೆಡಿಕಲ್ ಶಾಪ್ಸ್ ಆರ್ಡರ್ ಬುಕ್ಕಿಂಗ್ ಬಾಯ್ಸ್. 3) Bcom account with computer (Married Ladies Preference ) Experience 5 years.
ಎ.ಕೆ. ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ. ದಾವಣಗೆರೆ - 577004

**REQUIRED**
TELLECALLERS ONLY FOR LADIES FOR SCIENCE PU COLLEGE
LOCATION : DAVANGERE, ANJANEYA BADAVANE BIET ROAD
78999 905792
87628 67557

**ಸೈಟುಗಳು ಮಾರಾಟ ಇವೆ**
ಸಿದ್ಧವೀರಪ್ಪ 33x50 ಪೂರ್ವ, ವಿದ್ಯಾನಗರ 30x66 ಉತ್ತರ, ರಂಗನಾಥ ಬಡಾವಣೆ 40x80 ಪೂರ್ವ, ವಿನಾಯಕ 30x80 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್.ಎಸ್
97418 11694

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ರೋಡ್ 1st ಫ್ಲೋರ್ ಮತ್ತು ಹಿಂಬದಿಯ ಮಳಿಗೆ, ಈಶ್ವರ ರೇಡಿಯೋ & ಟಿವಿ ಎದುರು, ಜಯದೇವ ಸರ್ಕಲ್ ಹತ್ತಿರ D/O No. 407, ಮಳಿಗೆ ವಿಸ್ತೀರ್ಣ 1st ಫ್ಲೋರ್ ವಿಸ್ತೀರ್ಣ 10x100, ಹಿಂಬದಿಯ ಮಳಿಗೆ 10x50.
ಸಂಪರ್ಕಿಸಿ : ಉಲ್ಲಾಸ್
85498 16336

**CHANGE OF NAME**
I, Belagere Gurunanjappa Shivakumar (Old Name) R/o # 117 4th Block Kundur 577219, Davanagere Dist. I have changed my name as Belakere Gurunanjappa Shivakumar S/o Gurunanjappa Belagere (New Name) vide affidavit Dtd.16-2-2023 sworn before Notary M. Prathaparudra, Davanagere. In future all my dealings & transactions will be in my new name.
Sd/- Belakere Gurunanjappa Shivakumar

**WANTED FOR RECEPTIONIST**
Age 21 - 27,
Address : Hairpoint Unisex salon 2nd Floor, No 2988-2A,2B. 7th Main, 3rd Cross Rd, MCC 'B' Block, Davanagere. Karnataka 577004.
Contact no.
97386 64400, 91483 19342

**WANTED**
* Warden (Preferably Ex-army)
* Physical Education Teacher (MP.Ed.)
* Security Guard (Preferably Ex-army)
ANMOL PUBLIC SCHOOL
CONTACT
96207 68987, 94483 91963

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಹೆಸರು ಸ್ಪಷ್ಟೀಕರಣ**
ಲಕ್ಷ್ಮಿ ದೇವಿ ಕೆ.ಹೆಚ್. ಕೋಂ ರುದ್ರೇಶ್ ವಯಸ್ಸು 30 ವರ್ಷ ವಾಸ ಸುರಹೊನ್ನೆ ಗ್ರಾಮ ನ್ಯಾಮತಿ ತಾಲ್ಲೂಕು ದಾವಣಗೆರೆ ಜಿಲ್ಲೆ ವಾಸಿಯಾದ ನಾನು ನನ್ನ ಹೆಸರು ಶಾಲಾ ದಾಖಲಾತಿಯಲ್ಲಿ ಲಕ್ಷ್ಮಿ ಕೆ. ಹೆಚ್. ಬಿನ್ ಹನುಮಂತಪ್ಪ ಎಂದು, ಆಧಾರ ಕಾರ್ಡ್‌ನಲ್ಲಿ ಲಕ್ಷ್ಮಿ ಕೆ.ಹೆಚ್. ಕೋಂ ರುದ್ರೇಶ್ ಎಂದು, ಪಡಿತರ ಚೀಟಿಯಲ್ಲಿ ಲಕ್ಷ್ಮಿ ಕೆ. ಹೆಚ್. ಕೋಂ ರುದ್ರೇಶ್ ಎಂದು, ಪಾನ್‌ಕಾರ್ಡ್‌ನಲ್ಲಿ ಲಕ್ಷ್ಮಿ ಕೆ.ಹೆಚ್. ಬಿನ್ ಹನುಮಂತಪ್ಪ ಎಂದು, ಕರ್ನಾಟಕ ಬ್ಯಾಂಕ್ ನ್ಯಾಮತಿ ಶಾಖೆಯ ಉಳಿತಾಯ ಖಾತೆಯಲ್ಲಿ ಲಕ್ಷ್ಮಿ ಕೋಂ ರುದ್ರೇಶ್ ಎಂದು ನಮೂದಾಗಿರುತ್ತದೆ. ಈ ಮೇಲ್ಕಂಡ ಎಲ್ಲಾ ಹೆಸರುಗಳು ಹಾಗೂ ದಾಖಲಾತಿಗಳು ಒಬ್ಬರೇ ವ್ಯಕ್ತಿಗೆ ಸಂಬಂಧಿಸಿದಾಗಿದೆ. ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ವ್ಯಾಪಾರ ಸಾಲ ಆಸ್ತಿ ಸಾಲ**
ಮನೆ ಕಟ್ಟಲು ಮತ್ತು ಖರೀದಿಸಲು ಸಾಲ ಸೌಲಭ್ಯವಿದೆ
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
74835 24662

**ಖಾಲಿ ಜಾಗ / ಕಟ್ಟಡ ಖರೀದಿಗೆ ಬೇಕಾಗಿದೆ**
ದಾವಣಗೆರೆಯ ಪ್ರತಿಷ್ಠಿತ ದಿ ಪಾವಗಡ ಸೌಹಾರ್ದ ವಿವಿಧೋದ್ದೇಶ ಸಹಕಾರ ನಿ., ಸಂಸ್ಥೆಗೆ 30x40 ಅಥವಾ 30x50 ಅಡಿ ಅಳತೆಯ ಸೈಟು ಅಥವಾ ಕಟ್ಟಡ ಖರೀದಿಗೆ ಬೇಕಾಗಿದೆ. ಸಂಪರ್ಕಿಸಿ
88842 18143, 63609 09309, 98442 46233

# ವರ್ಷದ ನಂತರ ಲಂಕಾದಲ್ಲಿ ನಿರಂತರ ವಿದ್ಯುತ್

ಕೊಲಂಬೊ, ಫೆ. 16 – ಸುಮಾರು ಒಂದು ವರ್ಷದ ನಂತರ ಶ್ರೀಲಂಕಾದಲ್ಲಿ ನಿರಂತರ ವಿದ್ಯುತ್ ಪೂರೈಕೆ ಆರಂಭಿಸಲಾಗಿದೆ. ಐ.ಎಂ.ಎಫ್. ಷರತ್ತಿನ ಅನ್ವಯ ವಿದ್ಯುತ್ ದರ ಹೆಚ್ಚಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಶ್ರೀಲಂಕಾ ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಮೂಲಕ 2.9 ಶತಕೋಟಿ ಡಾಲರ್‌ಗಳ ಸಾಲ ಪಡೆಯಲು ಲಂಕಾ ಯತ್ನ ನಡೆಸುತ್ತಿದೆ. ಕಳೆದ ವರ್ಷ ಜನವರಿಯಿಂದ ಶ್ರೀಲಂಕಾದಲ್ಲಿ ಪ್ರತಿದಿನ ಒಂದರಿಂದ 14 ಗಂಟೆಗಳ ಕಾಲ ವಿದ್ಯುತ್ ಕಡಿತ ಮಾಡಲಾಗುತ್ತಿತ್ತು. ಈಗ ಶೇ.66ರಷ್ಟು ಬೆಲೆ ಹೆಚ್ಚಿಸುವ ಮೂಲಕ ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಅಧ್ಯಕ್ಷ ರಾಣಿಲ್ ವಿಕ್ರಮಸಿಂಘೆ ನಿರ್ದೇಶನ ನೀಡಿದ್ದಾರೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ವಿದ್ಯುತ್ ಬೆಲೆ ಶೇ.70ರಷ್ಟು ಹೆಚ್ಚಳ ಮಾಡಲಾಗಿತ್ತು. ಸಿಲೋನ್ ವಿದ್ಯುತ್ ಮಂಡಳಿ ಹಾಗೂ ಸಿಲೋನ್ ಪೆಟ್ರೋಲಿಯಂ ನಿಗಮಗಳು ತಮ್ಮ ಕಾರ್ಯನಿರ್ವಹಣೆಗೆ ಸರ್ಕಾರವನ್ನು ಅವಲಂಬಿಸಬಾರದು ಎಂದು ಐ.ಎಂ.ಎಫ್. ತಿಳಿಸಿತ್ತು. ಕಾರ್ಮಿಕ ಸಂಘಟನೆಗಳು ಹಾಗೂ ಪ್ರತಿಪಕ್ಷಗಳು ಬೆಲೆ ಏರಿಕೆ ಖಂಡಿಸಿವೆ. ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಹೇಳಿಕೆ ನೀಡಿವೆ. ಶ್ರೀಲಂಕ 51 ಶತಕೋಟಿ ಡಾಲರ್‌ಗಳ ವಿದೇಶಿ ಸಾಲದ ಹೊರೆಯಲ್ಲಿದೆ. ಇದರಲ್ಲಿ 28 ಶತಕೋಟಿ ಡಾಲರ್‌ಗಳನ್ನು 2027ರ ಒಳಗೆ ಮರು ಪಾವತಿಸಬೇಕಿದೆ.

# ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿಸಲು ಸರ್ಕಾರದ ಕ್ರಮ

## ಹರಪನಹಳ್ಳಿ : ಶ್ರೀ ಸಂತ ಸೇವಾಲಾಲ್‌ರವರ 284ನೇ ಜಯಂತ್ಯೋತ್ಸವದಲ್ಲಿ ಶಾಸಕ ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಫೆ.16- ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ಬಿಜೆಪಿ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ತಿಳಿಸಿದ್ದಾರೆ.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಸಮಿತಿ ವತಿಯಿಂದ ಶ್ರೀ ಸಂತ ಸೇವಾಲಾಲ್‌ರವರ 284ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಂಜಾರ ಸಮುದಾಯ ಸೇರಿದಂತೆ ವಿವಿಧ ಸಮುದಾಯಗಳಿಗೆ ನೀಡಲು 1100 ಹಕ್ಕು ಪತ್ರಗಳು ಸಿದ್ದಗೊಂಡಿವೆ. ಸಮಾಜದಲ್ಲಿ ಕೆಟ್ಟ ಭಾವನೆಗಳು ಹೆಚ್ಚಾದಾಗ ಸೇವಾಲಾಲ್ ನಂತಹ ಅನೇಕ ಮಹನೀಯರು ಜನ್ಮತಾಳಿ ಜನರಿಗೆ ಧರ್ಮದ ಅರಿವು ಮೂಡಿಸಿದ್ದಾರೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬಂಜಾರ ಅಭಿವೃದ್ಧಿ ನಿಗಮ ಸ್ಥಾಪಿಸಿ ಆ ಸಮುದಾಯದ ಅಭಿವೃದ್ಧಿಗೆ ಮುನ್ನುಡಿ ಬರೆದರು. ಬಂಜಾರ ಸಮುದಾಯದವರು ಕಾಯಕ ಜೀವಿಗಳಾಗಿದ್ದು, ಆ ಸಮುದಾಯದ ಅಭಿವೃದ್ಧಿಗೆ ತಾವು ಕೈಜೋಡಿಸುವುದಾಗಿ ಹೇಳಿದರು.

ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಪಿ.ಎಲ್. ಪೋಮ್ಯನಾಯ್ಕ ಮಾತನಾಡಿ, ಯಡಿಯೂರಪ್ಪನವರ ಸರ್ಕಾರ ಸೂರಗೊಂಡನಕೊಪ್ಪದಲ್ಲಿ ತಾಂಡಾ ನಿಗಮ ಘೋಷಣೆ ಮಾಡಿ ಅಭಿವೃದ್ಧಿಗೆ ನಾಂದಿ ಹಾಡಿದರೆ, ಸಿದ್ದರಾಮಯ್ಯನವರ ಸರ್ಕಾರ ಸೇವಾಲಾಲ್ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ರೂಪಿಸಿತು. ಹರಪನಹಳ್ಳಿ ತಾಲ್ಲೂಕಿನಲ್ಲಿ ಅಂದು ಶಾಸಕರಾಗಿದ್ದ ಈಗಿನ ಹೂವಿನ ಹಡಗಲಿ ಶಾಸಕ ಪಿ.ಟಿ.ಪರಮೇಶ್ವರನಾಯ್ಕರವರು 6 ತಾಂಡಾಗಳನ್ನು ಈ ಹಿಂದೆಯೇ ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದರು, ಈವರೆಗೂ ಅಕ್ಕ ಪಕ್ಕದ ತಾಲೂಕಿನಲ್ಲಿ ತಾಂಡಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾಗಿಲ್ಲವೆಂದು ಹೇಳಿದರು.

ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸೇವಾಲಾಲ್ ಮಹಾರಾಜರು ಭಾರತೀಯ ಅಧ್ಯಾತ್ಮಿಕ ನಾಯಕ ಹಾಗೂ ಬಂಜಾರ ಸಮುದಾಯದ ಸಂತ, ಸಂಸ್ಥಾಪಕ ಬಡ ಬಂಜಾರರ ಅಜ್ಞಾನ ದೂರ ಮಾಡಲು ಪ್ರಯತ್ನಿಸಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಎಡಿಎಲ್‌ಆರ್ ಬಳ್ಳಾರಪ್ಪ, ಸಮಾಜ ಕಲ್ಯಾಣಾಧಿಕಾರಿ ರೇಣುಕಾದೇವಿ, ಹಿಂದುಳಿದ ಇಲಾಖೆ ಕಲ್ಯಾಣಾಧಿಕಾರಿ ಮಂಜುಳಾ, ಅರಣ್ಯಾಧಿಕಾರಿ ಮಲ್ಲಪ್ಪ, ಪುರಸಭೆ ಸದಸ್ಯರಾದ ಎಂ.ಕೆ.ಜಾವೀದ್, ಇಸಿಓ ಕಬೀರನಾಯ್ಕ, ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಆರ್.ಲೋಕೇಶ್, ಶಿವಾನಂದ, ಎಲ್.ಬಿ.ಹಾಲೇಶನಾಯ್ಕ, ವಸಂತ ಪಾಟೀಲ್, ಸೇರಿದಂತೆ ಇತರರು ಇದ್ದರು.

# ಸಡಗರ - ಸಂಭ್ರಮದ ಕೊಟ್ಟೂರು ರಥೋತ್ಸವ



ಕೊಟ್ಟೂರು, ಫೆ.16- ಪಟ್ಟಣದಲ್ಲಿ ಗುರುವಾರ ಸಂಜೆ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತ ಸಮೂಹದ ನಡುವೆ ಶ್ರೀ ಗುರು ಕೊಟ್ಟೂರೇಶ್ವರ ರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.

ಮಾಘ ಬಹುಳ ದಶಮಿಯ ಮೂಲಾ ನಕ್ಷತ್ರ ಕೂಡಿದಾಗ ಕೊಟ್ಟೂರೇಶ್ವರರು ಜೀವಂತ ಸಮಾಧಿಯಾಗಿದ್ದರು, ಆ ಸಂದರ್ಭದಲ್ಲಿ ಪ್ರತಿ ವರ್ಷವೂ ಸ್ವಾಮಿಯ ರಥೋತ್ಸವ ಜರುಗುವುದು ವಿಶೇಷ. ಪಟ್ಟಣದ ಪರಿಶಿಷ್ಟ ಜಾತಿಯ ಸುಮಂಗಲೆಯರು ಆರತಿ ಬೆಳಗಿ, ನೈವೇದ್ಯ ಸಮರ್ಪಿಸಿದ ನಂತರ ಸ್ವಾಮಿಯ ರಥೋತ್ಸವ ಜರುಗುವುದು ಸನಾತನ ಕಾಲದಿಂದ ನಡೆದುಕೊಂಡ ಪದ್ಧತಿ ವಿಶೇಷವೂ ಆಗಿದೆ.

ಬೆಳಿಗ್ಗೆಯಿಂದಲೇ ಶ್ರೀ ಗುರು ಕೊಟ್ಟೂರೇಶ್ವರ ರಿಗೆ ವಿವಿಧ ಪೂಜೆಗಳನ್ನು ನೆರವೇರಿಸಲಾಯಿತು. ಆ ನಂತರ ವಿವಿಧ ಕಡೆಗಳಿಂದ ಲಕ್ಷಾಂತರ ಸಂಖ್ಯೆಯ ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ಇಡೀ ದಿನ ದೇಗುಲದ ಪರಿಸರದಲ್ಲಿ ಜನ ಜಾತ್ರೆ ಇದ್ದು ಸರತಿ ಸಾಲಿನಲ್ಲಿ ತಡಹೊತ್ತು ನಿಂತು ಭಕ್ತರು ದೇವರ ದರ್ಶನ ಪಡೆದರು.

ಕೊಟ್ಟೂರೇಶ್ವರ ದೇವಸ್ಥಾನದಿಂದ ಭಕ್ತರು ಕೊಟ್ಟೂರೇಶ್ವರ ಪಲ್ಲಕ್ಕಿಯನ್ನು ಹೊತ್ತು ದಲಿತ ಮಹಿಳೆ ಆರತಿ ಬೆಳಗುವುದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನಂದಿ ಧ್ವಜ ನಂದಿಕೋಲು ಕುಣಿತ ಸಮಳ ತಂಡಗಳು ಮೆರವಣಿಗೆಯಲ್ಲಿ ಸಾಗಿ ಮೆರಗು ಹೆಚ್ಚಿಸಿದರು. ರಥೋತ್ಸವಕ್ಕೆ ಸುತ್ತಲೂ ಭಕ್ತರು ಪ್ರದಕ್ಷಣೆ ಹಾಕಿದರು.

ಈ ವೇಳೆ ರಥಕ್ಕೆ ಏಣಿ ಜೋಡಿಸಿ ಕೊಟ್ಟೂರೇಶ್ವರ ಉತ್ಸವ ಮೂರ್ತಿಯನ್ನು ಅದರೊಳಗೆ ಪ್ರತಿಷ್ಠಾಪನೆ ಮಾಡಲಾಯಿತು. ಬಳಿಕ ನೆರೆದಿದ್ದ ಲಕ್ಷಾಂತರ ಭಕ್ತರ ನಡುವೆ ಅದ್ದೂರಿಯಾಗಿ ರಥವನ್ನು ಎಳೆಯಲಾಯಿತು. ಭಕ್ತರು ಬಾಳೆಹಣ್ಣು ತೂರಿ ಭಕ್ತಿ ಸಮರ್ಪಿಸಿದರು.

# 1008 ದಂಪತಿಗಳಿಂದ ಏಕಕಾಲದಲ್ಲಿ ಲಿಂಗ ಪೂಜೆ



ದಾವಣಗೆರೆ, ಫೆ.16- ನಗರದ ಹೈಸ್ಕೂಲ್ ಮೈದಾನದಲ್ಲಿ ಇದೇ ದಿನಾಂಕ 20ರಂದು ಸಂಜೆ ಮಹಾ ಶಿವರಾತ್ರಿ ನಿಮಿತ್ತ 1008 ದಂಪತಿಗಳು ಏಕಕಾಲದಲ್ಲಿ ಶಿವಪೂಜೆ ಮಾಡಲಿದ್ದಾರೆ. ಸಂಜೆ 5 ರಿಂದ 12ರ ವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಹೆಬ್ಬಾಳು ಕ್ಷೇತ್ರದ ಶ್ರೀ ರುದ್ರೇಶ್ವರ ಸ್ವಾಮೀಜಿ ಲಿಂಗಪೂಜೆ ನೆರವೇರಿಸಿ ಆಶೀರ್ವಚನ ನೀಡಲಿದ್ದು, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಶಿವರಾತ್ರಿ ಸಂದೇಶ ನೀಡುವರು. ಜತೆಗೆ ಶಿವ ಜಾಗರಣೆಯ ಭಾಗವಾಗಿ ಅಪರೂಪದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಘಟಿಸಲಾಗಿದೆ. 4 ತಾಸಿಗೂ ಹೆಚ್ಚು ಕಾಲ ಡೊಳ್ಳು ಕುಣಿತ, ಸ್ಯಾಕ್ಸೋಫೋನ್ ವಾದನ, ವೀಣಾ ವಾದನ, ಭಜನೆ, ಚೌಡಿಕೆ ಪದ, ಭರತನಾಟ್ಯ, ಸಾಮೂಹಿಕ ನೃತ್ಯ, ಸಂಗೀತ, ಭಕ್ತಿಗೀತೆ ಗಾಯನ ಇರುತ್ತದೆ.

ಕಾರ್ಯಕ್ರಮಕ್ಕಾಗಿ ವಿಶೇಷ ಪೆಂಡಾಲ್ ಹಾಕಿಸಲಾಗುತ್ತಿದ್ದು, ಮನುಜ ಮತ ವಿಶ್ವ ಪಥ ತತ್ವದಲ್ಲಿ ಎಲ್ಲರೂ ಸೇರಿ ಶಿವ ಪೂಜೆ ಸಂಘಟಿಸಲಾಗುತ್ತಿದೆ. 12ನೇ ಶತಮಾನದಲ್ಲಿ ಎಲ್ಲರನ್ನೂ ಒಗ್ಗೂಡಿಸುವ ಶರಣ ಚಳುವಳಿ ವಾತಾವರಣದಲ್ಲಿ ಕಾರ್ಯಕ್ರಮ ನಡೆಯುತ್ತಿರುವುದು ವಿಶೇಷ. ಕಾಯಕದಿಂದ ಸಮಾಜ ಸುಧಾರಣೆ ಮಾಡಿದ 32 ಶಿವಶರಣರ ಪ್ರತಿಕೃತಿಗಳ ಲಿಂಗ ಪೂಜೆ ಮಂಟಪ ಸಜ್ಜುಗೊಳಿಸಲಾಗುತ್ತಿದೆ. ಮಹಾಶಿವರಾತ್ರಿ ಭಕ್ತ ಬಳಗದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್ ವಹಿಸುವರು.

**16 ಸಂಘಟನೆಗಳು ಭಾಗಿ :** ಶರಣ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆ, ಬಸವ ಬಳಗ, ಅನುಭವ ಮಂಟಪ, ವಿಶ್ವ ಮಾನವ ಮಂಟಪ, ಒಕ್ಕಲಿಗ ಮುದ್ದಣ್ಣ ಅನುಭಾವ ಪೀಠ, ಅಖಂಡ ಕರ್ನಾಟಕ ರಕ್ಷಣಾ ವೇದಿಕೆ, ಸಾವಿತ್ರಿ ಬಾಪುಲೆ ಶಿಕ್ಷಕಿಯರ ಸಂಘ, ಭೋವಿ ಯುವ ವೇದಿಕೆ, ಯೋಗ ಫೆಡರೇಶನ್, ಬಸವ ಕಲಾಲೋಕ, ಸ್ನೇಹಜೀವಿ ಮಹಿಳಾ ಮಂಡಳಿ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹೀಗೆ ಎಲ್ಲರೂ ಸೇರಿ ಮಹಾ ಶಿವರಾತ್ರಿ ಭಕ್ತಿ ಬಳಗದ ಅಡಿಯಲ್ಲಿ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ. ವಿವರಕ್ಕೆ ರವಿ ಕುಮಾರ್ (9916287614), ಧನುಷ್ (90196 67115) ಅವರನ್ನು ಸಂಪರ್ಕಿಸಬಹುದು.

### ವಿಶೇಷ ಶಿವ ಪೂಜೆ

1008 ದಂಪತಿಗಳಿಗೆ ಹೆಬ್ಬಾಳು ಮಠದ ಸ್ವಾಮೀಜಿ ಅರ್ಧ ತಾಸಿನ ಶಿವಪೂಜೆ ಮಾಡಿಸಲಿದ್ದು, ಉದಯಶಂಕರ ಶಾಸ್ತ್ರಿಗಳ ವಟುಗಳು ರುದ್ರಪಠಣ ನಡೆಸಲಿದ್ದಾರೆ. ಅಜಯ್ ನಾರಾಯಣ್ ಅವರಿಂದ ಶಿವಸ್ತುತಿ ನೆರವೇರಲಿದೆ. ನಂತರ ಒಂದು ಗಂಟೆಯ ಸಭಾ ಕಾರ್ಯಕ್ರಮ ಬಳಿಕ ಸಾಂಸ್ಕೃತಿಕ ತಂಡಗಳು ಶಿವ ವೈಭವದ ಸಾಂಸ್ಕೃತಿಕ ಪ್ರದರ್ಶನ ನೀಡಲಿವೆ.

# ಫೆ.18 ರಂದು ಕುರುವತ್ತಿ ಬಸವೇಶ್ವರ ಜಾತ್ರೆ, ಪಾದಯಾತ್ರಿಗಳಿಗೆ ಬೀಳ್ಕೊಡುಗೆ

ದಾವಣಗೆರೆ, ಫೆ. 16- ಇದೇ ಫೆ.20ರಂದು ನಡೆಯಲಿರುವ ಕುರುವತ್ತಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ತೆರಳುವ ಪಾದಯಾತ್ರೆಗೆ ಫೆ.18ರಂದು ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಶ್ರೀ ಕುರುವತ್ತಿ ಬಸವೇಶ್ವರ ಪಾದಯಾತ್ರೆ ಸೇವಾ ಸಮಿತಿಯ ಕಾನೂನು ಸಲಹೆಗಾರ ಬಸವರಾಜಪ್ಪ ಕೊರಡೂರು ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ರಾತ್ರಿ 8 ಗಂಟೆಗೆ ನಡೆಯುವ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯವನ್ನು ನಂದಿತಾವರೆಯ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕೆ.ಬಿ. ಶಿವಕುಮಾರ್, ಕೆ.ಎಂ. ಲೋಕೇಶ್ವರಯ್ಯ, ಹೆಚ್.ಚನ್ನಬಸಪ್ಪ, ಶಂಭುಲಿಂಗಪ್ಪ ಬಿ.ಹೆಚ್., ಗಿರೀಶ್ ಬಿ.ಆರ್., ಸಣ್ಣಬಸಪ್ಪ ಇತರರು ಉಪಸ್ಥಿತರಿದ್ದರು.

# ಶ್ರೀ ಶಂಕರ ಮಠದಲ್ಲಿ ನಾಳೆ ರುದ್ರಹೋಮ

ದಾವಣಗೆರೆ, ಫೆ. 16 - ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಮದ್ ಜಗದ್ಗುರು ಕೂಡಲಿ ಶೃಂಗೇರಿ ಮಠದಲ್ಲಿ ಶಿವರಾತ್ರಿ ಮಹೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 18 ರಂದು ಶನಿವಾರ ಅಧ್ಯಾತ್ಮ ಪರಂಪರೆಯ ಶಾಸ್ತ್ರೋಕ್ತವಾಗಿ 4 ಆಯಾಮಗಳಲ್ಲಿ ರುದ್ರಾಭಿಷೇಕ, ಅರ್ಚನೆ, ರುದ್ರಹೋಮ ಮುಂತಾದ ಪ್ರಕ್ರಿಯೆಗಳು ನಡೆಯಲಿವೆ ಎಂದು ಶ್ರೀಮಠದ ಮುಖ್ಯಸ್ಥ ವೇದಮೂರ್ತಿ ಪವನ್ ಭಟ್ ತಿಳಿಸಿದ್ದಾರೆ.

18 ರ ಶನಿವಾರ ಸಂಜೆ 6 ರಿಂದ 19ರ ಭಾನುವಾರ 4 ಅಯಾಮಗಳಲ್ಲಿ ರುದ್ರಾಭಿಷೇಕ, 19ರ ಭಾನುವಾರ ರುದ್ರಹೋಮ, ಪೂರ್ಣಾಹುತಿ ಪ್ರಸಾದ ವಿನಿಯೋಗ ಹಮ್ಮಿಕೊಳ್ಳಲಾಗಿದೆ. ಈ ಪವಿತ್ರ ಅಧ್ಯಾತ್ಮ ಕಾರ್ಯಕ್ರಮದಲ್ಲಿ ಸೇವೆ ಸಂಕಲ್ಪ ಸಲ್ಲಿಸುವ ಆಸಕ್ತ ಸದ್ಭಕ್ತರು 9886212889, 8660164910 ಕ್ಕೆ ಸಂಪರ್ಕಿಸಬಹುದು.

# ರಂಗ ಶಿವರಾತ್ರಿ : ನಗರದಲ್ಲಿ ಇಂದಿನಿಂದ 4 ನಗೆ ನಾಟಕ ಪ್ರಸ್ತುತಿ

ವೃತ್ತಿ ರಂಗಭೂಮಿ ರಂಗಾಯಣ, ಚಿರಂತನ ಸಂಸ್ಥೆ (ದಾವಣಗೆರೆ) ಮತ್ತು ಗುರು ಇನ್‌ಸ್ಟಿಟ್ಯೂಟ್ (ಹುಬ್ಬಳ್ಳಿ) ಇವರ ಸಂಯುಕ್ತಾಶ್ರಯದಲ್ಲಿ ರಂಗಶಿವರಾತ್ರಿ- 2023 ಎಂಬ ಶೀರ್ಷಿಕೆಯಡಿ ನಾಲ್ಕುದಿನ ನಾಲ್ಕು ನಗೆ ನಾಟಕಗಳ ಪ್ರಸ್ತುತಿ 'ರಂಗೋತ್ಸವ' ಕಾರ್ಯಕ್ರಮವನ್ನು ಇಂದಿನಿಂದ ಇದೇ ದಿನಾಂಕ 20 ರವರೆಗೆ ಚಿಂದೋಡಿ ಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಪ್ರತಿ ದಿನ ಸಂಜೆ 6.30 ಕ್ಕೆ ನಾಟಕ ಪ್ರದರ್ಶನವಿದೆ. ಇಂದು 'ರಾಶಿ ಚಕ್ರ' ಏಕ ವ್ಯಕ್ತಿ ಹಾಸ್ಯ ರಂಗ ಪ್ರಯೋಗ, ನಾಳೆ ದಿನಾಂಕ 18 ರಂದು 'ಆಲ್ ದಿ ಬೆಸ್ಟ್' ಸುಂದರ ಕನ್ನಡ ನಗೆ ನಾಟಕ, ದಿನಾಂಕ 19 ಮತ್ತು 20 ರಂದು 'ಸೂಪರ್ ಸಂಸಾರ' ಹೊಚ್ಚ ಹೊಸ ನಗೆ ನಾಟಕ ಪ್ರದರ್ಶನಗೊಳ್ಳಲಿದೆ.

ಲವ್‌ಫುಡ್, ರಸವಂತಿ ಕೂಲ್ ಡ್ರಿಂಕ್ಸ್, ಹಳೆಮನೆ ಹೋಟೆಲ್, ಆಹಾರ್-2000 , ಚಿರಂತನ ಸಂಸ್ಥೆಯಲ್ಲಿ ಟಿಕೆಟ್‌ಗಳು ಲಭ್ಯವಿವೆ.

# ನಗರದಲ್ಲಿ ಇಂದು ನ್ಯೂ ಸೇಂಟ್ ಪೀಟರ್ ಕಾನ್ವೆಂಟ್ ವಾರ್ಷಿಕೋತ್ಸವ

ನ್ಯೂ ಸೇಂಟ್ ಪೀಟರ್ ಕಾನ್ವೆಂಟ್‌ನ 5 ನೇ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಇಂದು ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಬಿ.ಎನ್. ಮಲೇಶ್, ಗೌರವ ಅತಿಥಿಗಳಾಗಿ ಡಾ. ಶಿಲ್ಪಶ್ರೀ, ಸಿ. ಸುನಿಲ್ ಕುಮಾರ್, ಜೆ.ಜಿ. ನಯನ್ ಆಗಮಿಸುವರು.

ಕಾರ್ಯಕ್ರಮದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಗೀತ ಗಾಯನದ ಮೂಲಕ ಗೌರವವನ್ನು ಅರ್ಪಿಸಲಾಗುವುದು.

# ವಿರೋಧಿ ಶಕ್ತಿಗಳು ಸುಪ್ರೀಂ ಕೋರ್ಟ್ ದಾಳವಾಗಿಸುತ್ತಿವೆ : ಪಾಂಚಜನ್ಯ

ನವದೆಹಲಿ, ಫೆ. 16 – ಭಾರತ ವಿರೋಧಿ ಶಕ್ತಿಗಳು ತಮ್ಮ ಕೃತ್ಯಗಳಿಗೆ ಸುಪ್ರೀಂ ಕೋರ್ಟ್ ಅನ್ನು ದಾಳವಾಗಿ ಬಳಸಿಕೊಳ್ಳುವ ಸಂಚು ನಡೆಸಿವೆ ಎಂದು ಆರ್.ಎಸ್.ಎಸ್.ಗೆ ಸಂಬಂಧಿಸಿದ ವಾರ ಪತ್ರಿಕೆಯಾದ 'ಪಾಂಚಜನ್ಯ' ಹೇಳಿದೆ.

ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ವಿವಾದಿತ ಬಿ.ಬಿ.ಸಿ. ಸಾಕ್ಷ್ಯಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ತಡೆದಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.


ಈ ಕುರಿತು ಲೇಖನವೊಂದನ್ನು ಪ್ರಕಟಿಸಿರುವ ಪಾಂಚಜನ್ಯ, ಈ ಹಿಂದೆ ಮಾನವ ಹಕ್ಕುಗಳ ಹೆಸರಿನಲ್ಲಿ ಉಗ್ರರನ್ನು ರಕ್ಷಿಸುವ ಪ್ರಯತ್ನಗಳು ನಡೆದಿದ್ದವು. ಪರಿಸರದ ಹೆಸರಿನಲ್ಲಿ ಭಾರತದ ಬೆಳವಣಿಗೆಗೆ ಅಡ್ಡಿಪಡಿಸಲಾಗಿತ್ತು. ಈಗ ಭಾರತದ ವಿರುದ್ಧ ಅಪಪ್ರಚಾರ ನಡೆಸಲು ಹಕ್ಕು ಬೇಕೆಂದು ಪ್ರಯತ್ನ ನಡೆಸಲಾಗುತ್ತಿದೆ ಎಂದು ದೂರಿದೆ.

ಭಾರತದ ಹಿತಗಳ ರಕ್ಷಣೆಗಾಗಿ ಸುಪ್ರೀಂ ಕೋರ್ಟ್ ರೂಪಿಸಲಾಗಿದೆ. ಸುಪ್ರೀಂ ಕೋರ್ಟ್ ಭಾರತದ ತೆರಿಗೆದಾರ ಹಣದಿಂದ ನಿರ್ವಹಿಸಲ್ಪಡುತ್ತದೆ. ಭಾರತದ ವಿಧಿ, ವಿಧಾನಗಳಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್ ಕಾರ್ಯ ನಿರ್ವಹಿಸಬೇಕು. ಆದರೆ, ಸುಪ್ರೀಂ ಕೋರ್ಟನ್ನೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಬಿ.ಬಿ.ಸಿ. ಸಾಕ್ಷ್ಯಚಿತ್ರವು ಭಾರತದ ತೇಜೋವಧೆ ಮಾಡುವ ಉದ್ದೇಶದ ಪ್ರಚಾರದ ಸರಕಾಗಿದೆ. ಸಾಕ್ಷ್ಯಚಿತ್ರವು ಸುಳ್ಳು ಹಾಗೂ ಕಪೋಲ ಕಲ್ಪಿತ ಎಂದೂ ತಿಳಿಸಲಾಗಿದೆ.

ಭಾರತ ವಿರೋಧಿ ಶಕ್ತಿಗಳು ನಮ್ಮ ಪ್ರಜಾಪ್ರಭುತ್ವ, ನಮ್ಮ ಉದಾರತೆ ಹಾಗೂ ನಮ್ಮ ನಾಗರಿಕತೆಯ ಮಾನದಂಡಗಳನ್ನೇ ನಮ್ಮ ವಿರುದ್ಧ ಬಳಸುತ್ತಿವೆ ಎಂದೂ ಆರೋಪಿಸಲಾಗಿದೆ.

# ನಾಳೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ



ದಾವಣಗೆರೆ, ಫೆ.16- ನಾಡಿದ್ದು ದಿನಾಂಕ 18 ರ ಶನಿವಾರ ವಿದ್ಯಾನಗರದಲ್ಲಿರುವ ಶ್ರೀ ಈಶ್ವರ-ಪಾರ್ವತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ ಏರ್ಪಡಿಸಲಾಗಿದೆ.

ಬೆಳಿಗ್ಗೆ 5 ಗಂಟೆಗೆ ಶಿವನಿಗೆ ಸರ್ವ ಭಕ್ತಾದಿಗಳಿಂದ ರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ, ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 6 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಭಜನೆ, ಭರತನಾಟ್ಯ ಕಾರ್ಯಕ್ರಮಗಳು ನಡೆಯಲಿವೆ. ಅಂದು ರಾತ್ರಿ ಜಾಗರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರೂ ಆದ ಮಾಜಿ ಉಪಮಹಾಪೌರ ಬೆಳವನೂರು ನಾಗರಾಜಪ್ಪ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಬೆಳವನೂರು ನಾಗರಾಜಪ್ಪ ಹಾಗೂ ಸಮಿತಿಯ ಸದಸ್ಯರಾದ ಮಂಜುನಾಥ ಕುರ್ಕಿ, ಬೆಳವನೂರು ಪ್ರಭುದೇವ, ಡಿ.ಎಂ. ಶಿವಕುಮಾರ್ ಇವರು ಉಪಸ್ಥಿತರಿರುವರು.

# ಹಾಲಿವಾಣ : ಸ್ವಚ್ಛ ಸಂಕೀರ್ಣ ಘಟಕ ಉದ್ಘಾಟನೆ



ಮಲೇಬೆನ್ನೂರು, ಫೆ. 16- ಹಾಲಿವಾಣ ಗ್ರಾಮದಲ್ಲಿ ಗ್ರಾ.ಪಂ. ವತಿಯಿಂದ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸ್ವಚ್ಛ ಸಂಕೀರ್ಣ ಘಟಕವನ್ನು ಶಾಸಕ ಎಸ್. ರಾಮಪ್ಪ ಅವರು ಮಂಗಳವಾರ ಉದ್ಘಾಟಿಸಿದರು. ನಂತರ ಜನರಿಗೆ ಕಸ ಸಂಗ್ರಹಣಾ ಬಕೆಟ್‌ಗಳನ್ನು ವಿತರಿಸಲಾಯಿತು.

ಗ್ರಾ.ಪಂ. ಅಧ್ಯಕ್ಷ ಮಡಿವಾಳರ ಬಸವರಾಜ್, ಉಪಾಧ್ಯಕ್ಷೆ ಅಂಜಿತ ಸಂತೋಷ್‌ಕುಮಾರ್, ಸದಸ್ಯರಾದ ಲಕ್ಷ್ಮಿದೇವಿ ಮಂಜಪ್ಪ, ದೀಪರಾಜು, ಎಸ್.ಇ. ಹಾಲೇಶ್, ಲಲಿತಮ್ಮ ವಿಜಯಕುಮಾರ್, ಪಿ.ಕೆ. ಮೋಹನ್, ವಿಶಾಲಮ್ಮ ನಾಗರಾಜಪ್ಪ, ಜಿ. ಎಸ್. ಹನುಮಂತಪ್ಪ, ರೇಣುಕಮ್ಮ ವಿಜಯಕುಮಾರ್, ಕಮಲಾಬಾಯಿ ಪರಮೇಶ್ವರನಾಯ್ಕ, ನೇತ್ರಾವತಿ ಹನುಮಂತಪ್ಪ, ಕೆ. ಹೆಚ್. ಚಂದ್ರಪ್ಪ, ದಿಬ್ಬಳ್ಳಿ ಓಂಕಾರಪ್ಪ ಮತ್ತು ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಮುಖಂಡರಾದ ಎಸ್.ಜಿ. ಹಾಲೇಶಪ್ಪ, ಎಸ್.ಜಿ. ಸಂತೋಷ, ಕುಡಪಲಿ ತಿಪ್ಪೇಶ್, ಸಣ್ಣ ಪರಮೇಶ್ವರಪ್ಪ, ಜಿ.ಕೆ. ಮಲ್ಲೇಶಪ್ಪ, ಜಿ.ಕೆ. ಸುರೇಶ್, ದಿಬ್ಬಳ್ಳಿಯ ಗೌಡ್ರ ಶಿವಣ್ಣ, ಡಿ.ಜಿ. ಬಸಪ್ಪ, ಕೊಮಾರನಹಳ್ಳಿಯ ಹೋಟೆಲ್ ಪರಮೇಶ್ವರಪ್ಪ, ಎಸ್. ರಂಗನಾಥ್, ವೈ. ಮಂಜಪ್ಪ, ಗ್ರಾ.ಪಂ. ಪಿಡಿಓ ಶ್ರೀನಿವಾಸ್, ಕಾರ್ಯದರ್ಶಿ ರೇಣುಕಾ ಮತ್ತಿತರರು ಭಾಗವಹಿಸಿದ್ದರು.

ತಾ.ಪಂ. ಇಓ ಗಂಗಾಧರನ್ ಪ್ರಾಸ್ತಾವಿಕವಾಗಿ ಮಾತನಾಡಿದರು.

# ವಾಹನ ತಯಾರಿಕ ಉದ್ಯಮ ಕ್ಷೇತ್ರದಲ್ಲಿನ ಸ್ಪರ್ಧೆಯಿಂದ ನಿರೀಕ್ಷೆಗಳು, ಬಯಕೆಗಳು ಬದಲಾಗುತ್ತಿವೆ



ದಾವಣಗೆರೆ, ಫೆ. 16- ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ವಿಜ್ಞಾನ, ತಂತ್ರಜ್ಞಾನ ನಿರೀಕ್ಷೆ ಮೀರಿ ಬೆಳೆಯುತ್ತಿರುವುದರಿಂದ ಮಾರುಕಟ್ಟೆ ಸಂಸ್ಕೃತಿ ವಿಸ್ತಾರಗೊಳ್ಳುತ್ತಿರುವುದರಿಂದ ವಾಹನ ತಯಾರಿಕಾ ಉದ್ಯಮ ಕ್ಷೇತ್ರದಲ್ಲಿ ತೀವ್ರತರ ಸ್ಪರ್ಧೆ ಇದೆ. ಅದೇ ತರಹ ನಿರೀಕ್ಷೆಗಳು, ಬಯಕೆಗಳು ದಿನದಿಂದ ದಿನಕ್ಕೆ ಬದಲಾಗುತ್ತಾ ಇವೆ ಎಂದು ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ತಿಳಿಸಿದರು.

ಮಹಾಂತ ಮೋಟಾರ್ಸ್‌ನ ಮೆಗಾ ಸರ್ವೀಸ್ ಕ್ಯಾಂಪ್ ಎಮ್ ಪ್ಲಸ್‌ನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನತೆ ಸುರಕ್ಷತೆ ಮತ್ತು ಪ್ರಾಮಾಣಿಕ ಸೇವೆ ಬಯಸುತ್ತಿದ್ದಾರೆ. ಈ ನಿಟ್ಟಿನಲ್ಲಿ ತಾವೆಲ್ಲರೂ ನಿಷ್ಠೆ, ಬದ್ಧತೆ, ಪ್ರಾಮಾಣಿಕತೆಯಿಂದ ಕಾಲ ವ್ಯಯ ಮಾಡದೇ ಸೇವೆ ಸಲ್ಲಿಸಬೇಕು ಎಂದು ಕೆಲಸಗಾರರಿಗೆ ಕರೆ ನೀಡಿದರು.

ಸರ್ವೀಸ್ ಮ್ಯಾನೇಜರ್ ಮಾರುತಿ ನಿಕ್ಕಮ್ ಸ್ವಾಗತಿಸಿದರು. ಜನರಲ್ ಮ್ಯಾನೇಜರ್ ಎ. ಕಿರಣ್, ಕಸ್ಟಮರ್ ಕೇರ್ ಮ್ಯಾನೇಜರ್ ಸಂತೋಷ್ ವಿ. ಬಳ್ಳಾರಿ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

# ಹರಿಹರದಲ್ಲಿ ಲಾರಿ ಹರಿದು ಕಂಡಕ್ಟರ್ ಸಾವು

ದಾವಣಗೆರೆ, ಫೆ.16- ಪಾದಚಾರಿಯೊಬ್ಬರ ಮೇಲೆ ಲಾರಿ ಹರಿದು ಸ್ಥಳದಲ್ಲಿಯೇ ವ್ಯಕ್ತಿ ಸಾವನ್ನಪ್ಪಿದ ಘಟನೆ ಹರಿಹರ ಪಟ್ಟಣದಲ್ಲಿ ಗುರುವಾರ ಸಂಭವಿಸಿದೆ. ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ವಿನಾಯಕ (44) ಮೃತ ದುರ್ದೈವಿ. ಹರಿಹರದ ಎ.ಕೆ. ಕಾಲೋನಿ ವಾಸಿ ವಿನಾಯಕ ಮನೆಗೆ ಹೋಗುತ್ತಿದ್ದ ವೇಳೆ ಹರಿಹರದ ಮಂಜುನಾಥ್ ಎಂಬುವವರಿಗೆ ಸೇರಿದ ಲಾರಿ ಹರಿದು ಮೃತಪಟ್ಟಿದ್ದಾರೆ. ನಗರಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ.

# ಪ್ರಾಣಿ ವಧೆ-ಮಾಂಸ ಮಾರಾಟ ನಿಷೇಧ

ದಾವಣಗೆರೆ, ಫೆ.16- ಪಾಲಿಕೆಯ ವ್ಯಾಪ್ತಿ ಯಲ್ಲಿ ಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 18 ರ ಶನಿವಾರ ಪ್ರಾಣಿ ವಧೆ, ಪ್ರಾಣಿ ಮಾಂಸ, ಮೀನಿನ ಮಾಂಸ ಮಾರಾಟವನ್ನು ನಿಷೇಧಿಸ ಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

# ಬಿಬಿಸಿ ಮಾಧ್ಯಮ ಕಚೇರಿ ಮೇಲೆ ಐಟಿ ದಾಳಿ ಖಂಡಿಸಿ ಪತ್ರಕರ್ತರ ಸಂಘದ ಪ್ರತಿಭಟನೆ



ದಾವಣಗೆರೆ, ಫೆ. 16- ಬಿಬಿಸಿ ಮಾಧ್ಯಮ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿರುವುದನ್ನು ಖಂಡಿಸಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೇತೃತ್ವದಲ್ಲಿ ಪತ್ರಕರ್ತರು ಕೈಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ, ನಂತರ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅವರು, ಮಾಧ್ಯಮ ಸಂಸ್ಥೆಗಳ ಮೇಲೆ ಐಟಿ ದಾಳಿ ನಡೆದಿರುವುದು ಖಂಡನೀಯ. ಮಾಧ್ಯಮಗಳು ಸಂವಿಧಾನದ ನಾಲ್ಕನೇ ಅಂಗ ಎಂದು ಪರಿಗಣಿಸಲ್ಪಟ್ಟಿವೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಸಮಾಜವನ್ನು ಸನ್ನಡತೆಗೆ ತರಲು ಶ್ರಮಿಸುವ ಮೂಲಕ ತನ್ನದೇ ಆದ ಘನತೆ ಉಳಿಸಿಕೊಂಡು ಬಂದಿದೆ ಎಂದರು.

ಸರ್ಕಾರಗಳು ದಾರಿ ತಪ್ಪಿದಾಗ ಎಚ್ಚರಿಸುವ ಕೆಲಸವನ್ನು ಮಾಧ್ಯಮಗಳು ಮಾಡುತ್ತಿವೆ. ಅಲ್ಲದೇ ಪ್ರಜಾಪ್ರಭುತ್ವದ ತಳಹದಿ ಗಟ್ಟಿಯಾಗಬೇಕಾದರೆ ಮಾಧ್ಯಮಗಳು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಆದರೆ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ನೀಡದೇ, ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕಲು ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿರುವುದು, ಪ್ರಜಾಪ್ರಭುತ್ವ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವರದಿಗಾರರ ಕೂಟದ ಮಾಜಿ ಅಧ್ಯಕ್ಷ ಬಸವರಾಜ ದೊಡ್ಮನಿ ಮಾತನಾಡಿ, ದೇಶದಲ್ಲಿ ಪ್ರಸ್ತುತ ವಾತಾವರಣ ಸರಿಯಾಗಿಲ್ಲ. ಮಾಧ್ಯಮ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿರುವುದು ಪತ್ರಕರ್ತರ ವಾಕ್ ಸ್ವಾತಂತ್ರ್ಯ ಕಸಿದುಕೊಂಡಿದೆ. ಇದನ್ನು ಇಡೀ ಪತ್ರಕರ್ತ ಸಮೂಹ ಒಕ್ಕೊರಲಿನಿಂದ ಖಂಡಿಸಬೇಕು. ನಮ್ಮ ಆಕ್ರೋಶವನ್ನು ದಾಖಲಿಸುವ ಮೂಲಕ ಪತ್ರಕರ್ತರ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜಿಲ್ಲಾ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಡಾ. ವರದರಾಜ್, ಹಿರಿಯ ಪತ್ರಕರ್ತರಾದ ಪಿ.ಷಣ್ಮುಖಸ್ವಾಮಿ, ರಂಗನಾಥ್ ಮತ್ತಿತರರು ಮಾತನಾಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್ ಕಾರ್ಯಕ್ರಮ ನಿರೂಪಿಸಿದರು.

ಖಜಾಂಚಿ ಎನ್.ವಿ. ಬದರಿನಾಥ್, ಉಪಾಧ್ಯಕ್ಷರಾದ ಆರ್.ಎಸ್. ತಿಪ್ಪೇಸ್ವಾಮಿ, ಹೆಚ್. ಎನ್. ಪ್ರಕಾಶ್, ಜೆ.ಎಸ್. ವೀರೇಶ್, ನಿಂಗೋಜಿ ರಾವ್, ಎಂ.ಎಸ್. ರಾಮೇಗೌಡ, ಜೈಮುನಿ, ಚಿದಾನಂದ, ಶಾಂತಕುಮಾರ್, ಎ.ಎನ್. ನಿಂಗಪ್ಪ, ಚಂದ್ರಶೇಖರ್, ಗುರುರಾಜ್, ನಂದಕುಮಾರ್, ಕೃಷ್ಣ, ಶಿವಮೂರ್ತಿ, ಎ.ಬಿ. ರುದ್ರಮ್ಮ, ಮೊಹಮ್ಮದ್ ರಫೀಕ್, ವಿವೇಕ್ ಮತ್ತಿತರರಿದ್ದರು.



# ಸಂಸಾರದಲ್ಲಿ ಪ್ರೀತಿ ಇದ್ದರೆ ಸ್ವರ್ಗ, ವಿರಸ ಉಂಟಾದರೆ ನರಕ

### ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್‌ನ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ

ದಾವಣಗೆರೆ, ಫೆ. 16- ಸಂಸಾರದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಇದ್ದರೆ ಬದುಕು ಸ್ವರ್ಗ. ದ್ವೇಷ, ಅಸೂಯೆ, ಮತ್ಸರ, ಅವಿಶ್ವಾಸ, ಅಪನಂಬಿಕೆ ಇದ್ದರೆ ಬಾಳು ನರಕವಾಗುತ್ತದೆ ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಪ್ರತಿಪಾದಿಸಿದರು.

ಇಲ್ಲಿನ ಗಾಂಧಿನಗರದಲ್ಲಿ ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಇಂದು ಹಮ್ಮಿಕೊಂಡಿದ್ದ 32 ನೇ ವರ್ಷದ ಶ್ರೀ ಗುರು ಮಾದಾರ ಚನ್ನಯ್ಯ ಸ್ವಾಮೀಜಿಯವರ ಜಯಂತ್ಯುತ್ಸವ, ಶ್ರೀ ಗುರು ರಾಮದಾಸ ಸ್ವಾಮಿಗಳ 65 ನೇ ವರ್ಷದ ಮತ್ತು ಶ್ರೀ ಮಲ್ಲಯ್ಯ ಸ್ವಾಮಿಗಳ 21 ನೇ ವರ್ಷದ ಹಾಗೂ ಶ್ರೀ ಕೊಂಡಯ್ಯ ಸ್ವಾಮಿಗಳ 17 ನೇ ವರ್ಷದ ಪುಣ್ಯಾರಾಧನೆ, 32 ನೇ ವರ್ಷದ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆ ಶೀರ್ವಚನ ನೀಡಿದರು.

ಮಾನವನಿಗೆ ಕಣ್ಣುಗಳೆರಡು ದೃಷ್ಟಿ ಒಂದೇ, ಕಿವಿಗಳೆರಡು ಶಬ್ದ ಒಂದೇ, ಸತಿ-ಪತಿಗಳಿಬ್ಬರಿದ್ದರೂ ಮನಸ್ಸು ಒಂದೇ. ಸಂಸಾರದಲ್ಲಿ ಪ್ರೀತಿ ಇದ್ದರೆ ಸ್ವರ್ಗ, ದ್ವೇಷವಿದ್ದರೆ ನರಕ ಎಂದರು.

ಸಂಸಾರದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಮುಖ್ಯ. ಮನಸ್ತಾಪ, ಅಪನಂಬಿಕೆ, ಮತ್ಸರ, ಅವಿಶ್ವಾಸ ಭಾವನೆಗಳು ಉಂಟಾದರೆ ಸಂಸಾರವೆಂಬ ಬಂಡಿ ಸರಾಗವಾಗಿ ಸಾಗಲು ಸಾಧ್ಯವಿಲ್ಲ. ವಿರಸದಿಂದ ಕುಟುಂಬಗಳು ಛಿದ್ರಗೊಳ್ಳುವ ಸಾಧ್ಯತೆಗಳಿರುತ್ತವೆ. ಪರಸ್ಪರ ಹೊಂದಾಣಿಕೆಯಿದ್ದರೆ ಬದುಕಿನ ಬಂಡಿ ಸುಗಮವಾಗಿ ಸಾಗುತ್ತದೆ ಎಂದು ಹೇಳಿದರು.

ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಆದಿಜಾಂಬವ ಮಠದ ಶ್ರೀ ಷಡಾಕ್ಷರ ಮುನಿ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್, ಟ್ರಸ್ಟ್ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಖಜಾಂಚಿ ಬಿ.ಎಂ. ರಾಮಸ್ವಾಮಿ, ಎಂ. ದುಗ್ಗಪ್ಪ, ಎಲ್.ಎಂ.ಹೆಚ್. ಸಾಗರ್, ಪಾಲಿಕೆ ಸದಸ್ಯ ಜಿ.ಡಿ. ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಸಹಸ್ರ ಲಿಂಗ ದರ್ಶನ ಪ್ರದರ್ಶನ



ದಾವಣಗೆರೆ,ಫೆ.16- ನಗರದ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 18ರ ಶನಿವಾರ ಶ್ರೀ ಸ್ವಾಮಿಗೆ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಶನಿವಾರ ಮುಂಜಾನೆ ಶ್ರೀ ಲಿಂಗೇಶ್ವರ ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮತ್ತು ಪೂಜೆಗಳು ನಡೆಯಲಿವೆ ಎಂದು ದೇವಸ್ಥಾನ ಸಮಿತಿ ಕಾರ್ಯದರ್ಶಿ ಕಿರುವಾಡಿ ವಿ. ಸೋಮಶೇಖರ್ ತಿಳಿಸಿದ್ದಾರೆ.

ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಶನಿವಾರ ಇಡೀ ದಿನವೂ ಸಹಸ್ರ ಲಿಂಗ ದರ್ಶನದ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಅಲ್ಲದೇ, ಶನಿವಾರ ರಾತ್ರಿ 11 ಗಂಟೆಗೆ ನಮನ ಅಕಾಡೆಮಿಯಿಂದ ಶಿವ ಸ್ಮರಣೆಯ ನೃತ್ಯ ಪ್ರದರ್ಶನ ಆಯೋಜನೆಗೊಂಡಿದೆ.

## ದಿಂಡಿ ಉತ್ಸವದ ಸಂತ ಸಮಾರಾಧನೆ



ದಾವಣಗೆರೆಯ ವಸಂತ ರಸ್ತೆಯಲ್ಲಿರುವ ಭಾವಸಾರ ಕ್ಷತ್ರಿಯ ದೈವ ಮಂಡಳಿಯಿಂದ ನಡೆಯುತ್ತಿರುವ ಶ್ರೀ ವಿಠೋಬ ದೇವರ ದಿಂಡಿ ಉತ್ಸವ ಕಾರ್ಯಕ್ರಮದಲ್ಲಿ ಇಂದು ಪ್ರಾತಃಕಾಲ 5 ಕ್ಕೆ ಕಾಕಡಾರತಿ, ಬೆಳಿಗ್ಗೆ 9 ಕ್ಕೆ ದಿಂಡಿ ಉತ್ಸವ ನಡೆಯಲಿದೆ. ನಂತರ ಪೂಜಾ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು. ಮಧ್ಯಾಹ್ನ 1 ಕ್ಕೆ ಶ್ರೀಮತಿ ಅಂಬಾಬಾಯಿ ನವಲೆ ಬಸವಣ್ಯಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀ ಸಂತ ಸಮಾರಾಧನೆ ಜರುಗಲಿದೆ.

## ಲಿಂಗೇಶ್ವರ ದೇವಸ್ಥಾನದ ಬಳಿ ಬಿಡ್ಜ್ ಕೆಲಸ ಶೀಘ್ರ ಪೂರೈಸಲು ಸೋಮನಾಥ್ ಆಗ್ರಹ



ದಾವಣಗೆರೆ, ಫೆ.16- ನಗರದ ಶ್ರೀ ಲಿಂಗೇಶ್ವರ ದೇವಸ್ಥಾನದ ಬಳಿ ರೈಲ್ವೆ ಅಂಡರ್ ಬಿಡ್ಜ್ ಕೆಲಸವು ತೀರಾ ಮಂದಗತಿಯಲ್ಲಿ ಸಾಗಿದ್ದು, ಕೆಲಸಕ್ಕೆ ವೇಗ ನೀಡಿ ಶೀಘ್ರ ಪೂರ್ಣಗೊಳಿಸುವಂತೆ ಸಾಮಾಜಿಕ ಸೇವಾ ಕಾರ್ಯ ಕರ್ತರಾದ ಜೆ. ಸೋಮನಾಥ್ ಆಗ್ರಹಿಸಿದ್ದಾರೆ. ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಓಡಾಡಲು ಜಾಗವಿಲ್ಲದಂತಾಗಿದೆ. ಶಿವರಾತ್ರಿ ಹತ್ತಿರದಲ್ಲಿರುವುದರಿಂದ ಲಿಂಗೇಶ್ವರ ದೇವಸ್ಥಾನಕ್ಕೆ ವಿಪರೀತ ಜನ ಬರುತ್ತಾರೆ ಹಾಗಾಗಿ ಬಿಡ್ಜ್ ಕೆಲಸವನ್ನು ಬೇಗನೆ ಪೂರೈಸುವಂತೆ ಒತ್ತಾಯಿಸಿದ್ದಾರೆ.

## ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಫೆ.16- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ದಿನಾಂಕ 20 ಮತ್ತು 21 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ನಡೆಯಲಿದೆ. ಸಂಪರ್ಕಿಸಿ : 08192-233787.


ನಾವು ಒಳರೋಗಿ ಸೇವೆಗಳನ್ನು ಆರಂಭಿಸಿದ್ದೇವೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

ಉಚಿತ ಹೊರ ರೋಗಿಗಳ ಸಮಾಲೋಚನೆ

10% ರಿಯಾಯಿತಿ
- ಒಳರೋಗಿ ದಾಖಲಾತಿಗಳ ಮೇಲೆ
- ಔಷಧಿಗಳ ಮೇಲೆ

20% ರಿಯಾಯಿತಿ
- ಸಿಟಿ ಸ್ಕ್ಯಾನ್
- ಬಯಾಪ್ಸಿ
- ಅಲ್ಟ್ರಾಸೌಂಡ್ ಸ್ಕ್ಯಾನ್ (USG)
- ಎಂಡೋಸ್ಕೋಪಿ (ರೋಗನಿರ್ಣಯ ಮತ್ತು ಚಿಕಿತ್ಸೆ)
- ರಕ್ತ ಹಾಗೂ ಇತರೆ ಪರೀಕ್ಷೆಗಳು

ಕಾಸ್ಮೆಟಾಲಜಿ ಕಾರ್ಯವಿಧಾನಗಳು
- ಮೊಡವೆ ಕಲೆಗಳಿಗೆ ಚಿಕಿತ್ಸೆ
- ಪ್ಲೇಟ್ಲೆಟ್ ರಿಚ್ ಪ್ಲಾಸ್ಮ (PRP) ಚಿಕಿತ್ಸೆ ತಲೆ ಕೂದಲಿನ ಬೆಳವಣಿಗೆಗಾಗಿ
- ಕೆಮಿಕಲ್ ಪೀಲ್ ಚಿಕಿತ್ಸೆ
- ಮಚ್ಚೆಗಳನ್ನು ತೆಗೆಯುವುದು

- ನರಶಾಸ್ತ್ರ
- ಸಂಧಿವಾತ
- ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ
- ಕ್ಯಾನ್ಸರ್ ಶಸ್ತ್ರಚಿಕಿತ್ಸೆ
- ಕ್ಯಾನ್ಸರ್ ಚಿಕಿತ್ಸೆ (ಕೀಮೋಥೆರಪಿ)
- ಜನರಲ್ ಮೆಡಿಸಿನ್
- ಚರ್ಮಶಾಸ್ತ್ರ
- ವಿಕಿರಣಶಾಸ್ತ್ರ (ಎಕ್ಸ್-ರೇ, ಅಲ್ಟ್ರಾಸೌಂಡ್ ಸ್ಕ್ಯಾನ್, ಸಿಟಿ ಸ್ಕ್ಯಾನ್)

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ, ಕೊಡುಗೆ ಸೀಮಿತ ಅವಧಿಗೆ ಮಾನ್ಯವಾಗಿರುತ್ತದೆ*

ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ) ತರಳಬಾಳು ಲೇಔಟ್, ದಾವಣಗೆರೆ | 08192-260333/260222/7022260111



ಶಿವ || ಶ್ರೀ ಮರುಳಸಿದ್ದೇಶ್ವರ ಪ್ರಸನ್ನ || ಶಿವ

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಮರಣ : 05-02-2023

ಹರಪನಹಳ್ಳಿ ತಾಲ್ಲೂಕು ಉ. ಬೇವಿನಹಳ್ಳಿ ಗ್ರಾಮದ ವಾಸಿ ಪಾಟೀಲ್ ಕೆಂಚನಗೌಡ್ರು ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 05-02-2023ನೇ ಭಾನುವಾರ ಮಧ್ಯಾಹ್ನ 3:30 ಗಂಟೆಗೆ ನಮ್ಮ ಮಾತೃಶ್ರೀಯವರಾದ

ಶರಣೆ ಶ್ರೀಮತಿ ಪಿ.ನಿಂಗಮ್ಮ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ 17-02-2023ನೇ ಶುಕ್ರವಾರ ಬೆಳಿಗ್ಗೆ 10-30 ಗಂಟೆಗೆ ಉ.ಬೇವಿನಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ನಿರ್ಮಲ, ಶ್ರೀ ಪಾಟೀಲ್ ಕೆಂಚನಗೌಡ್ರು ತಾ.ಪಂ. ಮಾಜಿ ಸದಸ್ಯರು ಉಚ್ಚಂಗಿದುರ್ಗ. ಶ್ರೀಮತಿ ಇಂದಿರಾ, ಶ್ರೀ ಮಂಜುನಾಥ ಪಾಟೀಲ್, ಅಧ್ಯಕ್ಷರು, ವ್ಯ.ಸೇ. ಸ. ಬ್ಯಾಂಕ್, ಉಚ್ಚಂಗಿದುರ್ಗ. ಶ್ರೀಮತಿ ಸುಧಾ, ಶ್ರೀ ಶಿವನಗೌಡ ಪಾಟೀಲ್

ಮಗಳು : ಶ್ರೀಮತಿ ಗೌರಮ್ಮ ಮತ್ತು ಅಳಿಯ : ಎನ್.ಎನ್.ಗುರುಬಸವರಾಜು, ಪಲ್ಲಾಗಟ್ಟೆ.

ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು,

ಶ್ರೀ ಮರುಳಸಿದ್ದೇಶ್ವರ ಸ್ಟೋನ್ ಕ್ರಷರ್, ಪಿ.ವಿ.ಜಿ ಸ್ಟೋನ್ ಕ್ರಷರ್ ಹಾಗೂ ಸಿಬ್ಬಂದಿ ವರ್ಗ.

ಲಿಂ|| ಮಲ್ಲಮ್ಮ, ಲಿಂ|| ಪಾಟೀಲ್ ಪರಶುರಾಮನಗೌಡ್ರು ವಂಶಸ್ಥರು, ಗ್ರಾಮಸ್ಥರು, ಉ.ಬೇವಿನಹಳ್ಳಿ,

ಮೊ : 99725 91858, 98443 77222

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



MAHA TVS

WANTED

- Customer Care Executive (c.c)
- Accountant

Tally Knoweldge, M.Com Graduation 3 to 5 years Experience.

CONTACT

MAHA AUTOMOBILE

#5961, Opp. Vani Rice Mill, Shivakumara, Swamy Layout, Hadadi Road, Davanagere.

M : 70221 15555, 99806 29965



ಇಂದಿನಿಂದ ಅಮೋಘ ಪ್ರಾರಂಭ

ಅಂತಾರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ

ಗೃಹಶೋಭೆ



10 Days

GRUHA SHOBHE

LIVING STYLE EXHIBITION

TIMING : 11 Am to 9 Pm

Special Attraction

Cake Show







ALIENS SHOW

ಮುಖ್ಯ ಅತಿಥಿಗಳು

ಉದ್ಘಾಟನೆ : ಸಂಜೆ 6.00 ಘಂಟೆಗೆ



ಶ್ರೀಮತಿ ಆರ್. ಜಯಮ್ಮ ಗೋಪಿನಾಯ್ಕ

ಮಹಾಪೌರರು ಮಹಾನಗರಪಾಲಿಕೆ, ದಾವಣಗೆರೆ

ಫೆಬ್ರವರಿ 17 ರಿಂದ 26 ರವರೆಗೆ

ಸರ್ಕಾರಿ ಹೈಸ್ಕೂಲ್ ಮೈದಾನ, ಮಹಾನಗರ ಪಾಲಿಕೆ ಹತ್ತಿರ, ದಾವಣಗೆರೆ

ENTRY Rs. 10/- Children Below 10 Years Free Entry PARKING FREE



ಮಹಾ ಟಿ.ವಿ.ಎಸ್., ದಾವಣಗೆರೆ TVS

ಮೆಘಾ ಎಕ್ಸ್‌ಚೇಂಜ್ ಹಾಗೂ ಸಾಲಮೇಳ



ರೂ. 750/- ರಿಂದ ರೂ. 10000/- ವರೆಗೆ ಸ್ಕ್ರಾಚ್ ಕೂಪನ್ ಡಿಸ್ಕೌಂಟ್ ಪಡೆಯಿರಿ ಹಾಗೂ

ರೂ. 1000/-* ಕ್ಯಾಷ್‌ಬ್ಯಾಕ್



ಹೆಲ್‌ಮೆಟ್ + ಬಾಡಿ ಕವರ್ ಉಚಿತ



| XL 100 | Jupiter | Sport | Radeon |
|---|---|---|---|
| ಕಡಿಮೆ ಡೌನ್‌ಪೇಮೆಂಟ್ ರೂ.1/-* | ಕಡಿಮೆ ಡೌನ್‌ಪೇಮೆಂಟ್ ರೂ.5,999/-* | ಕಡಿಮೆ ಡೌನ್‌ಪೇಮೆಂಟ್ ರೂ.6,666/-* | ಕಡಿಮೆ ಡೌನ್‌ಪೇಮೆಂಟ್ ರೂ.9,999/-* |
| ಎಕ್ಸ್ ಶೋರೂಮ್ ಬೆಲೆ ರೂ.49,990/- ರಿಂದ ಪ್ರಾರಂಭ | ಎಕ್ಸ್ ಶೋರೂಮ್ ಬೆಲೆ ರೂ.76,821/- ರಿಂದ ಪ್ರಾರಂಭ | ಎಕ್ಸ್ ಶೋರೂಮ್ ಬೆಲೆ ರೂ.64,520/- ರಿಂದ ಪ್ರಾರಂಭ | ಎಕ್ಸ್ ಶೋರೂಮ್ ಬೆಲೆ ರೂ.71,218/- ರಿಂದ ಪ್ರಾರಂಭ |



MAHA AUTOMOBILE

#596, Opp. Vani Rice Mill, Shivakumara Swamy Badavane 2nd Stage, Hadadi Road, DAVANGERE-577 004.


Call : 70221 15555, 70268 62220, 96069 55738, 63600 05351, 82170 29070

E-mail: mahaautomobile55@gmail.com



|| ಶ್ರೀ ಕಲ್ಲೇಶ್ವರ ಪ್ರಸನ್ನ ||

26ನೇ ವರ್ಷದ ಪುಣ್ಯಸ್ಮರಣೆ



ಲಿಂ|| ಶಾಮನೂರು ಶಿವಪ್ಪನವರು

ಲಿಂಗೈಕ್ಯ : 17.02.1997


ನೀವು ನಮ್ಮನ್ನಗಲಿ 26 ವರ್ಷಗಳು ಸಂದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಲಿಂ. ಶ್ರೀ ಶಾಮನೂರು ಜಯಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.



|| ಶ್ರೀ ಕಲ್ಲೇಶ್ವರ ಪ್ರಸನ್ನ ||

26ನೇ ವರ್ಷದ ಪುಣ್ಯಸ್ಮರಣೆ



ಕಾಯಕದಿಂದ ಕೈಲಾಸ

ಲಿಂ|| ಶಾಮನೂರು ಶಿವಪ್ಪನವರು

ಲಿಂಗೈಕ್ಯ : 17.02.1997ರ ಸೋಮವಾರ

ನೀವು ನಮ್ಮನ್ನಗಲಿ 26 ವರ್ಷಗಳಾದವು. ನಮಗೆ ಸದಾ ಮಾರ್ಗದರ್ಶಿಗಳಾಗಿದ್ದು, ನನ್ನ ಮತ್ತು ನನ್ನ ಕುಟುಂಬ ವರ್ಗದ ಹಿತೈಷಿಗಳಾಗಿದ್ದ ಹಾಗೂ ನಗರದ ಗಣ್ಯ ವರ್ತಕರೂ,ಲಿಂಗವಂತ ಸಮಾಜದ ಮುಖಂಡರೂ ಆಗಿದ್ದ ಲಿಂ. ಶರಣ ಶಾಮನೂರು ಶಿವಪ್ಪನವರ 26ನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ತಮ್ಮನ್ನು ಸದಾ ಸ್ಮರಿಸುವ

ದಿ|| ಆಲೂರು ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte